PRGI NO : KNKAN/26/A0884

ಈ ನಮ್ಮ

# ಧೃತಿ ನ್ಯೂಸ್

ಸಧೃಡತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

E NAMMA DHURTHI NEWS KANNADA DAILY NEWS PAPER

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 223 ಪುಟಗಳು: 04 ಬೆಲೆ: 02 ದಿನಾಂಕ: 23-10-2026 ಶುಕ್ರವಾರ

email: enammadhruthinews@gmail.com Pho : 7353595904

## ಮಳೆ ಇಲ್ಲದೇ ಕಂಗಾಲಾಗಿರುವ ರೈತನಿಗೆ ಮಳೆ-ಬೆಳೆ ಕೊಟ್ಟು ಆದಿಶಕ್ತಿ ಕರುಣಿಸಲಿ : ಡಾ. ಮಹಾಂತೇಶ ಬುಕನಟ್ಟಿ

ಧೃತಿ ನ್ಯೂಸ್ ಸುದ್ದಿ

ಕುಷ್ಟಗಿ: ಈ ನಾಡಿನ ರೈತ ಈ ವರ್ಷ ಸಾಕಷ್ಟು ಮಳೆ ಇಲ್ಲದೇ ಬೆಳೆಗಳು ಬಾಡಿ ಒಣಗಿ ಹೋಗುತ್ತಿವೆ. ಈ ನಾಡಿನ ರೈತರನ್ನು ಹಾಗೂ ಭಕ್ತರನ್ನು ಸದಾ ಕಾಪಾಡುವ ಕರುಣಾಮಯಿ ಆದಿಶಕ್ತಿ ದುರ್ಗಾಪರಮೇಶ್ವರಿ ದೇವಿಯು ನಾಡಿನ ರೈತನಿಗೆ ಒಳ್ಳೆಯ ಹಿಂಗಾರು ಮಳೆ-ಬೆಳೆ ಕೊಟ್ಟು ಕಾಪಾಡಲಿ ಎಂದು ಡಾ. ಮಹಾಂತೇಶ ಬುಕನಟ್ಟಿ ಹೇಳಿದರು.




ಪಟ್ಟಣದ ತಾವರಗೇರಾ ರಸ್ತೆಯ ಈಶಾನ್ಯ ಭಾಗದಲ್ಲಿ ನೆಲೆ ನಿಂತಿರುವ ಈ ದೇವತೆಯು ಅತ್ಯಂತ ಶಕ್ತಿಶಾಲಿ ದೇವತೆಯಾಗಿದ್ದಾರೆ. ಭಕ್ತರು ತಮ್ಮ ತನು-ಮನ-ಧನವನ್ನು ಕೊಟ್ಟು ದೇವಿಯ ದರ್ಶನ ಪಡೆದು ತಮ್ಮ ಕಷ್ಟ-ಕಾರ್ಪಣ್ಯಗಳನ್ನು ದೂರ ಮಾಡಿಕೊಳ್ಳಲು ಸದಾ ಶ್ರೀ ದುರ್ಗಾಪರಮೇಶ್ವರಿಯು ಆಶೀರ್ವಾದ ಮಾಡುತ್ತಾಳೆ ಎಂದರು. ಬಳಿಕ ಮಾತನಾಡಿದ ಮಾಜಿ ಸೈನಿಕ ಶಿವಾಜಿ ಹಡಪದ ಅವರು, ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಆದಿಶಕ್ತಿ ದುರ್ಗಾಪರಮೇಶ್ವರಿ ದೇವಿಗೆ ವಿಶೇಷ ಪೂಜೆ, ಅನ್ನಸಂತರ್ಪಣೆಯನ್ನು ಸುಮಾರು 9 ದಿನಗಳ ಕಾಲ ಮಾಡುತ್ತಾ ಬಂದಿದ್ದು, ಶ್ರೀ ಆದಿಶಕ್ತಿ ದೇವಿಗೆ ಪಟ್ಟಣದ ಭಕ್ತರು ಮಾತ್ರವಲ್ಲದೆ ಬೇರೆ ಜಿಲ್ಲೆಯ ಭಕ್ತರು ಸಹ ತಮ್ಮ ಕೈಲಾದ ಕಾಣಿಕೆ ಕೊಟ್ಟು ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಸಲು ಮುಂದಾಗಿದ್ದಾರೆ. ಆ ಜಗನ್ಮಾತೆಯು ಸದಾ ಭಕ್ತರ ಕಷ್ಟ-ಕಾರ್ಪಣ್ಯಗಳನ್ನು ಕಳೆದು ಸುಖ-ಶಾಂತಿ ಕೊಟ್ಟು ಕಾಪಾಡಲಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಡಾ. ದೇವೇಂದ್ರಪ್ಪ ಬಳೂಟಗಿ, ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ನಜೀರಸಾಬ ಮೂಲಿಮನಿ ಮಾಜಿ ಸೈನಿಕ ಬಸನಗೌಡ ಪಾಟೀಲ್ ಸೇರಿದಂತೆ ದೇವಸ್ಥಾನದ ಅರ್ಚಕರು, ಪದಾಧಿಕಾರಿಗಳು ಮತ್ತು ಅಪಾರ ಸಂಖ್ಯೆಯ ಭಕ್ತರು ಉಪಸ್ಥಿತರಿದ್ದರು.

# ಅ.26ರಂದು ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ರೈತರ ಜೊತೆ ಸಿಎಂ ಸಭೆ

ಧೃತಿ ನ್ಯೂಸ್ ಸುದ್ದಿ

ಬೆಂಗಳೂರು: ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ಅಕ್ಟೋಬರ್ 26ರಂದು ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ರೈತರ ಸಭೆ ಕರೆಯಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿಯವರು ಈ ವಿಚಾರವಾಗಿ ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಇದೇ ತಿಂಗಳ 26 ರಂದು ನಡೆಯುವ ಸಭೆಯಲ್ಲಿ ತಾವೂ ಭಾಗವಹಿಸುವುದಾಗಿ ಜೋಷಿಯವರು ಆರಂಭದಲ್ಲೇ ಹೇಳಿದ್ದರು. ಆದರೆ ಕೊನೇ ಕ್ಷಣದಲ್ಲಿ ಸಭೆಯಲ್ಲಿ ಭಾಗವಹಿಸಲಾಗುತ್ತಿಲ್ಲ ಎಂದು ತಿಳಿಸಿದ್ದಾರೆ. ಮುಂದೊಂದು ದಿನ ತಾವು ಪ್ರತ್ಯೇಕ ಸಭೆ ಮಾಡುವುದಾಗಿ ಹೇಳಿದ್ದಾರೆ ಎಂದರು.

ಕಬ್ಬು ಬೆಳೆಗಾರರ ಸಮಸ್ಯೆ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಹೀಗಾಗಿ ಕೇಂದ್ರ ಸರ್ಕಾರದ ಅಧಿಕಾರಿಗಳನ್ನು ಕೂಡ ಸಭೆಯಲ್ಲಿ ಭಾಗವಹಿಸಲು ಸೂಚಿಸಲಾಗಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.ಇಂದು ದೆಹಲಿಗೆ ತಾವು ಭೇಟಿ ನೀಡುತ್ತಿದ್ದು, ಮೂರ್ನಾಲ್ಕು



ಗಂಟೆಗಳ ಕಾಲ ಅಲ್ಲಿದ್ದು, ಕೆಲವಾರು ಸಭೆಗಳನ್ನು ನಡೆಸಿ, ಕೇಂದ್ರ ಸಚಿವರನ್ನು ಭೇಟಿ ಮಾಡಿ ಸಂಜೆಯೇ ವಾಪಸ್ ಬರುತ್ತೇನೆ ಎಂದರು. ನಾಳೆ ಬೆಂಗಳೂರಿಗೆ ಪೋಲ್ಯಾಂಡ್ ಪ್ರಧಾನಿ ಆಗಮಿಸುತ್ತಿದ್ದು, ತಾವು ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಬೇಕಿದೆ. ಅದರ ಬಳಿಕ ಮತ್ತೊಂದು ದಿನ ದೆಹಲಿಗೆ ತೆರಳುವುದಾಗಿ ಹೇಳಿದರು.

ಮಹದಾಯಿ ನದಿ ವಿವಾದಕ್ಕೆ ಸಂಬಂಧಪಟ್ಟಂತೆ ರೈತರ ಬೇಡಿಕೆಗಳಿವೆ. ಅಲ್ಲಿ ಚುನಾವಣೆ ನಡೆಯುತ್ತಿರುವುದರಿಂದ ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದರೂ ಈ ಬಗ್ಗೆ ತಾವು ದೆಹಲಿ ಭೇಟಿಯ ವೇಳೆ ಚರ್ಚೆ ಮಾಡುತ್ತೇನೆ ಎಂದರು.

ತುಂಗಾಭದ್ರಾನದಿಯಲ್ಲಿ ನೀರಿನ ಕೊರತೆ ಎದುರಾಗಿದೆ, ಅಲ್ಲಲ್ಲಿ ಮೋಟರ್-ಪಂಪ್‌ಗಳನ್ನು ಅಳವಡಿಸಿ ಆ ನೀರನ್ನು ಬಳಸಿಕೊಳ್ಳುತ್ತಿರುವುದ-ರಿಂದ ತೊಂದರೆಯಾಗುತ್ತಿದೆ. ಕಾವೇರಿಯಂತೆ ತುಂಗಾಭದ್ರೆಯಲ್ಲೂ ನೀರಿಲ್ಲದೆ ಬರಿದಾಗಿದೆ ಎಂದು ಹೇಳಿದರು.ನೀರಿನ ಕೊರತೆಯ ಬಗ್ಗೆ ಆಂಧ್ರಪ್ರದೇ?ಶದ ಮುಖ್ಯಮಂತ್ರಿ ಜೊತೆ ಚರ್ಚಿಸಲು ಅಗತ್ಯ ಇದೆ. ನಾನಾದರೂ ಅಲ್ಲಿಗೆ ಹೋಗುತ್ತೇನೆ ಅಥವಾ ಆಂಧ್ರಪ್ರದೇಶ ಮುಖ್ಯಮಂತ್ರಿಯವರೇ ದೆಹಲಿಗೆ ಬಂದರೆ ಭೇಟಿ ಮಾಡುತ್ತೇನೆ ಎಂದು ಹೇಳಿದರು.

**ಪ್ರಧಾನಿಯವರ ಜೊತೆ ಚರ್ಚೆಗೆ ಪ್ರಯತ್ನ:**

ಬರ ವಿಚಾರವಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿ ಕ್ರಿಯಾ ಯೋಜನೆಯ ಚರ್ಚೆ ನಡೆಸಬೇಕಿದೆ. ಕೇಂದ್ರದಿಂದ ಬರ ವೀಕ್ಷಣೆಗೆ ಮತ್ತೊಂದು ತಂಡ ಬರಬೇಕು. ಬೇರೆ ರಾಜ್ಯದವರು ಏನೆಲ್ಲಾ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ ಎಂಬುದನ್ನು ಪರಿಶೀಲಿಸಬೇಕು. ಈ ಎಲ್ಲಾ ವಿಚಾರಗಳಿಗಾಗಿ ಅಧಿಕಾರಿಗಳ ತಂಡವೊಂದನ್ನು ನೇಮಿಸಿದ್ದೇನೆ. ಅವರ ಜೊತೆ ಕೂಡ ಚರ್ಚೆ ನಡೆಸಬೇಕಿದೆ ಎಂದು ಹೇಳಿದರು.

## ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ-2026 ; ಕೊಪ್ಪಳ ಜಿಲ್ಲೆಯಲ್ಲಿ ಮಸ್ಟರಿಂಗ್ ಕಾರ್ಯ ಯಶಸ್ವಿ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ; ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ-2026ರ ಹಿನ್ನೆಲೆಯಲ್ಲಿ ಕೊಪ್ಪಳ ತಹಶೀಲ್ದಾರ ಕಚೇರಿ ಸೇರಿದಂತೆ ಜಿಲ್ಲೆಯ ವಿವಿಧೆಡೆ ಗುರುವಾರ (ಅ. 22ರಂದು) ಮಸ್ಟರಿಂಗ್ ಕಾರ್ಯ ಯಶಸ್ವಿಯಾಗಿ ಜರುಗಿತು.

ಮತದಾನ ಕರ್ತವ್ಯಕ್ಕೆ ನಿಯೋಜನೆಗೊಂಡ ಸಿಬ್ಬಂದಿಗೆ ಬ್ಯಾಲಟ್ ಬಾಕ್ಸ್ ಸೇರಿದಂತೆ ಅಗತ್ಯ ಚುನಾವಣಾ ಸಾಮಗ್ರಿಗಳನ್ನು ವಿತರಿಸಿ, ಪೊಲೀಸ್ ಭದ್ರತೆಯೊಂದಿಗೆ ಆಯಾ ಮತಗಟ್ಟೆಗಳಿಗೆ ಕಳುಹಿಸಿಕೊಡಲಾಯಿತು. ಚುನಾವಣಾ ಕರ್ತವ್ಯಕ್ಕೆ ನಿಯೋಜಿತ ಅಧಿಕಾರಿಗಳು ಮತ್ತು ಸಿಬ್ಬಂದಿಯು ಮತಗಟ್ಟೆಗೆ ಅವಶ್ಯವಿರುವ ನಮೂನೆ, ಲಕೋಟೆ ಹಾಗೂ ಸ್ಟೇಷನರಿ ಸಾಮಾಗ್ರಿಗಳೊಂದಿಗೆ ಮತಗಟ್ಟೆಗಳತ್ತ ತೆರಳಿದರು. ಕೊಪ್ಪಳ ತಹಸೀಲ್ದಾರ್ ಕಚೇರಿಗೆ ಜಿಲ್ಲಾಧಿಕಾರಿಗಳಾದ ಡಾ. ಸುರೇಶ್ ಬಿ. ಇಟ್ನಾಳ ಅವರು ಭೇಟಿ ನೀಡಿ, ಮಸ್ಟರಿಂಗ್ ಪ್ರಕ್ರಿಯೆಯನ್ನು ಖುದ್ದು ಪರಿಶೀಲಿಸಿ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ಮಾಡಿದರು.

ಈಶಾನ್ಯ ಶಿಕ್ಷಕರ ಕ್ಷೇತ್ರಕ್ಕೆ ಅಕ್ಟೋಬರ್ 23ರಂದು ಬೆಳಿಗ್ಗೆ 8 ರಿಂದ ಸಂಜೆ 4 ಗಂಟೆಯವರೆ ಮತದಾನ ನಡೆಯಲಿದೆ. ಮತದಾನವು ನಿಗದಿಪಡಿಸಿದ ಸಮಯಕ್ಕೆ ಆರಂಭವಾಗಬೇಕು. ಮತದಾನ ಕೇಂದ್ರಕ್ಕೆ ನಿಯೋಜನೆಗೊಂಡ ಅಧಿಕಾರಿಗಳು ಮತ್ತು ಸಿಬ್ಬಂದಿ ಜಾಗೃತೆಯಿಂದ ಕಾರ್ಯನಿರ್ವಹಿಸಬೇಕು. ಮತದಾನ ಮುಕ್ತಾಯದ ನಂತರ ಬ್ಯಾಲೆಟ್ ಬಾಕ್ಸ್‌ಗಳನ್ನು ಬಿಗಿ ಭದ್ರತೆಯಲ್ಲಿ ಭದ್ರತಾ ಕೊಠಡಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕು. ಮತದಾನ ಕೇಂದ್ರಗಳಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗೆ ಅವಕಾಶ ನೀಡಬಾರದು. ಶಾಮಿಯಾನ ವ್ಯವಸ್ಥೆ, ಮತಗಟ್ಟೆ ಸಿಬ್ಬಂದಿಗೆ



ಊಟೋಪಚಾರದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲು ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾ-ರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಸಹಾಯಕ ಆಯುಕ್ತರಾದ ಮಹೆಬೂಬ್ ಜೀಲಾನ್ ಖುರೇಶಿ, ಕೊಪ್ಪಳ ತಹಶೀಲ್ದಾರ್ ಬಸವರಾಜ್ ತನ್ನಳ್ಳಿ, ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ ಸೇರಿದಂತೆ ಕಂದಾಯ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಮತಗಟ್ಟೆಗೆ ಸಿಬ್ಬಂದಿ ನಿಯೋಜನೆ:** ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯನ್ನು ಸುಗಮ ಮತ್ತು ಶಾಂತಿಯುತ ಮತದಾನಕ್ಕಾಗಿ ಪ್ರತಿ ಮತಗಟ್ಟೆಗೆ ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಪ್ರತಿ ಮತಗಟ್ಟೆಗೆ ನಾಲ್ವರು ಮತಗಟ್ಟೆ ಅಧಿಕಾರಿ-ಸಿಬ್ಬಂದಿ, ಒಬ್ಬರು ಡಿ-ದರ್ಜೆ ನೌಕರ ಹಾಗೂ ಅಗತ್ಯಕ್ಕೆ ತಕ್ಕಂತೆ ಪೊಲೀಸ್ ಸಿಬ್ಬಂದಿಯನ್ನು ನೇಮಿಸಲಾಗಿದ್ದು, ಪ್ರತಿ ಮತಗಟ್ಟೆಗೆ ಒಬ್ಬ ಮೈಕ್ರೋ ಆಬ್ಸರ್ವರ್ ಅವರನ್ನು ಸಹ ನಿಯೋಜಿಸಲಾಗಿದೆ.

**ಕೊಪ್ಪಳ ಜಿಲ್ಲೆಯ ಮತಗಟ್ಟೆಗಳ ವಿವರ:**

ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತದಾನಕ್ಕಾಗಿ ಕೊಪ್ಪಳ ಜಿಲ್ಲೆಯಲ್ಲಿ 20 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಗಂಗಾವತಿ ತಾಲ್ಲೂಕಿನಲ್ಲಿ ಗಂಗಾವತಿ ಬಸ್ ನಿಲ್ದಾಣದ ಹತ್ತಿರದ ಸರ್ಕಾರಿ ಉರ್ದು ಪ್ರೌಢಶಾಲೆ (ಮತಗಟ್ಟೆ ಸಂಖ್ಯೆ; 108), ತಾಲ್ಲೂಕಿನ ವೆಂಕಟಗಿರಿ ಗ್ರಾಮ ಪಂಚಾಯತ್ ಕಾರ್ಯಾಲಯ ಕಟ್ಟಡ (ಮತಗಟ್ಟೆ 109), ಮರಳಿ ಗ್ರಾಮ ಪಂಚಾಯತ್ ಕಾರ್ಯಾಲಯ ಕಟ್ಟಡ (ಮತಗಟ್ಟೆ 110). ಕಾರಟಗಿ ತಾಲ್ಲೂಕಿನಲ್ಲಿ ಕಾರಟಗಿಯ ಕರ್ನಾಟಕ ಪಬ್ಲಿಕ್ ಶಾಲೆ ಪಿಯು ವಿಭಾಗ ಕಟ್ಟಡ (ಮತಗಟ್ಟೆ 111), ಕಾರಟಗಿ ತಾಲ್ಲೂಕಿನ ಸಿದ್ದಾಪುರ ಗ್ರಾಮ ಪಂಚಾಯತ್ ಕಾರ್ಯಾಲಯ ಕಟ್ಟಡ (ಮತಗಟ್ಟೆ 112). ಕನಕಗಿರಿ ಪಟ್ಟಣ ಪಂಚಾಯತ್ ಕಾರ್ಯಾಲಯ ಕಟ್ಟಡ (ಮತಗಟ್ಟೆ 113). ಕುಷ್ಟಗಿ ತಾಲ್ಲೂಕಿನಲ್ಲಿ ಕುಷ್ಟಗಿ ತಹಶೀಲ್ದಾರ್ ಕಾರ್ಯಾಲಯದ ಸಿಬ್ಬಂದಿ ಕೊಠಡಿ (ಮತಗಟ್ಟೆ 114) ಮತ್ತು ತಹಶೀಲ್ದಾರ್ ಕಾರ್ಯಾಲಯದ ಸರ್ವೆ ಕೊಠಡಿ (ಮತಗಟ್ಟೆ 115), ಕುಷ್ಟಗಿ ತಾಲ್ಲೂಕಿನ ಹನುಮನಾಳ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ (ಮತಗಟ್ಟೆ 116), ಹನುಮಸಾಗರ ಪಟ್ಟಣ ಪಂಚಾಯತ್ ಕಾರ್ಯಾಲಯ ಕಟ್ಟಡ (ಮತಗಟ್ಟೆ 117), ತಾವರಗೇರಾ ಪಟ್ಟಣ ಪಂಚಾಯತ್ ಕಾರ್ಯಾಲಯ ಕಟ್ಟಡ (ಮತಗಟ್ಟೆ 118). ಕುಕನೂರು ತಾಲ್ಲೂಕಿನಲ್ಲಿ ಕುಕನೂರು ಪಟ್ಟಣ ಪಂಚಾಯತ್ ಕಾರ್ಯಾಲಯ ಕಟ್ಟಡ (ಮತಗಟ್ಟೆ 119), ಕುಕನೂರು ತಾಲ್ಲೂಕಿನ ಮಂಗಳೂರು ಸರ್ಕಾರಿ ಮಾದರಿ ಹಿರಿಯ ಪ್ರಾಥ-'ಮಿಕ ಶಾಲಾ (ಪೂರ್ವ ಭಾಗ) ಕಟ್ಟಡ (ಮತಗಟ್ಟೆ 120). ಯಲಬುರ್ಗಾ ತಾಲ್ಲೂಕಿನಲ್ಲಿ ಯಲಬುರ್ಗಾದ ಸರ್ಕಾರಿ ಪಿಯು ಕಾಲೇಜು (ಪ್ರೌಢಶಾಲಾ ವಿಭಾಗ) ನೂತನ (ದಕ್ಷಿಣ ಭಾಗ) ಕಟ್ಟಡ (ಮತಗಟ್ಟೆ 121), ಯಲಬುರ್ಗಾ ತಾಲ್ಲೂಕಿನ ಹಿರೇವಂಕಲಕುಂಟಾ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾ (ಮಧ್ಯ ಭಾಗ) ಕಟ್ಟಡ (ಮತಗಟ್ಟೆ 122). ಕೊಪ್ಪಳ ತಾಲ್ಲೂಕಿನಲ್ಲಿ ಅಳವಂಡಿ ಗ್ರಾಮ ಪಂಚಾಯತ್ ಕಾರ್ಯಾಲಯ ಕಟ್ಟಡ (ಮತಗಟ್ಟೆ 123), ಇರಕಲಗಡ ಗ್ರಾಮ ಪಂಚಾಯತ್ ಕಾರ್ಯಾಲಯ ಕಟ್ಟಡ (ಮತಗಟ್ಟೆ 124), ಕೊಪ್ಪಳ ತಾಲ್ಲೂಕು ಪಂಚಾಯತ್ ಕಾರ್ಯಾಲಯ ಕಟ್ಟಡ (ಮತಗಟ್ಟೆ 125), ಕೊಪ್ಪಳ ರೈಲ್ವೆ ನಿಲ್ದಾಣ ರಸ್ತೆಯ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ (ಮತಗಟ್ಟೆ 126) ಹಾಗೂ ಹಿಟ್ನಾಳ್ ಗ್ರಾಮ ಪಂಚಾಯತ್ ಕಾರ್ಯಾಲಯ ಕಟ್ಟಡ (ಮತಗಟ್ಟೆ ಸಂಖ್ಯೆ; 127). ಈ ಎಲ್ಲಾ 20 ಮತಗಟ್ಟೆಗಳಲ್ಲಿ ಮತದಾನವು ಅಕ್ಟೋಬರ್ 23ರಂದು ಬೆಳಿಗ್ಗೆ 8 ಗಂಟೆಯಿಂದ ಪ್ರಾರಂಭವಾಗಿ ಸಂಜೆ 4 ಗಂಟೆಗೆ ಮುಕ್ತಾಯವಾಗಲಿದ್ದು, ಇದಕ್ಕಾಗಿ ಕೊಪ್ಪಳ ಜಿಲ್ಲಾಡಳಿತವು ಅಗತ್ಯ ಸಿದ್ಧತೆಗಳನ್ನು ಕೈಗೊಂಡಿದೆ. ಮತದಾನವನ್ನು ಮುಕ್ತ, ನ್ಯಾಯಸಮ್ಮತ ಹಾಗೂ ಶಾಂತ ರೀತಿಯಲ್ಲಿ ಕೈಗೊಳ್ಳಲು ಪೊಲೀಸ್ ಬಿಗಿ ಭದ್ರತೆಯನ್ನು ಸಹ ಒದಗಿಸಲಾಗಿದೆ.

## ಕುಲದೇವತೆ ಶ್ರೀ ತುಳಜಾಭವಾನಿಯ ನವರಾತ್ರಿ ಮತ್ತು ದಸರಾ ಮಹೋತ್ಸವ ಸಂಪನ್ನ



ಧೃತಿ ನ್ಯೂಸ್ ಸುದ್ದಿ

ಕನಕಗಿರಿ: ಪಟ್ಟಣದ ದೇವಿ ಆರಾಧಕಾರ ಭಕ್ತರಲ್ಲಿ ಒಬ್ಬರಾದ ದಿ. ಬಾಳಮ್ಮ ಗಂಡ ತುಳಜಪ್ಪ ವಾಲಿಕಾರ ಇವರ ಮಕ್ಕಳು ಮೊಮ್ಮಕ್ಕಳು ತಮ್ಮ ಮನೆಯಲ್ಲಿ ?ದಸರಾ ಮತ್ತು ನವರಾತ್ರಿ ಹಬ್ಬದ ವಿಶೇಷ ಹಿನ್ನೆಲೆಯಲ್ಲಿ, ಕುಲದೇವತೆ ಶ್ರೀ ತುಳಜಾಭವಾನಿ ದೇವಿಯ ಆರಾಧನೆಯು ಅತ್ಯಂತ ಶ್ರದ್ಧಾಭಕ್ತಿ ಹಾಗೂ ಸಂಪ್ರದಾಯಬದ್ಧವಾಗಿ ನೆರವೇರಿಸಿದರು.

ನವರಾತ್ರಿಯ ಆರಂಭದ ದಿನದಂದು ದೇವಿಯ ಸನ್ನಿಧಿಯಲ್ಲಿ ವಿಧ್ಯುಕ್ತವಾಗಿ ಘಟ್ಟ ಸ್ಥಾಪನೆ ಮಾಡಲಾಗಿದ್ದು, ಒಂಬತ್ತು ದಿನಗಳ ಕಾಲ ನಿರಂತರವಾಗಿ ನಂದಾ ದೀಪವನ್ನು ಬೆಳಗಿಸಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಯಿತು. ನವರಾತ್ರಿಯ ಒಂಬತ್ತು ದಿನಗಳ ಧಾರ್ಮಿಕ ವಿಧಿವಿಧಾನಗಳ ನಂತರ, ವಿಜಯದಶಮಿಯ ದಿನದಂದು ಸಾಂಪ್ರದಾಯಿಕ ಗೋಂದಳಿ ಪೂಜೆ ಮತ್ತು ಕಾರ್ಯಕ್ರಮಗಳೊಂದಿಗೆ ದಸರಾ ಮಹೋತ್ಸವವು ಮಂಗಳಕರವಾಗಿ ಸಂಪನ್ನಗೊಂಡಿತು. ಜಾನಪದ ಶೈಲಿಯಲ್ಲಿ ಹೇಳುವ ದೇವಿ ಕಥೆಯು ಹೆಚ್ಚು ಪ್ರಸಿದ್ಧವಾಗಿದ್ದು, ಜನರ ಮನಸ್ಸು ಸುರೇಗೊಂಡಿತು. ಪೂರ್ವಜರ ಕಾಲದಿಂದಲೂ ಗೊಂಡಳಿ ಪೂಜೆಯನ್ನು ತಮ್ಮ ಕುಲ ಕಸುಬಾಗಿ ಮಾಡಿಕೊಂಡಿರುವ ಗೊಂದಳಿ ಸಮಾಜದ ಹಿರಿಯರಾದ ರಾಮಣ್ಣ, ಉದಯಕುಮಾರ, ವಾಮದೇವ ಮತ್ತು ಸಂಗಡಿಗರು ಇಂದಿಗೂ ಮುಂದುವರಿಸಿಕೊಂಡು ಬಂದಿದ್ದಾರೆ. ಭಕ್ತರ ಮನೆಗೆ ಬಂದು ದೇವಿ ಆರಾಧಿಸುವ ಮೂಲಕ ಗೊಂದಳಿ ಪೂಜೆ ಮಾಡಿ ಗೌರವ ಕಾಣಿಕೆಯನ್ನು ಪಡೆಯುತ್ತಾರೆ. ಈ ಧಾರ್ಮಿಕ ಹಾಗೂ ಸಾಂಪ್ರದಾಯಿಕ ಆಚರಣೆಯಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು.

## ಕೊಟ್ಟೂರಿನಲ್ಲಿ ಸಂಭ್ರಮದ ವಿಜಯದಶಮಿ ಆಚರಣೆ



ಧೃತಿ ನ್ಯೂಸ್ ಸುದ್ದಿ

ಕೊಟ್ಟೂರು: ಪಟ್ಟಣದಲ್ಲಿ ವಿಜಯದಶಮಿ ಹಬ್ಬವನ್ನು ಬುಧವಾರ ಸಡಗರ, ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಿಸಲಾಯಿತು. ನಗರದ ಆರಾಧ್ಯ ದೈವ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬೆಳಗಿನ ಜಾವದಿಂದಲೇ ಧಾರ್ಮಿಕ ಕೈಂಕರ್ಯಗಳು ನೆರವೇರಿದವು.

ದೇವಸ್ಥಾನದ ಅರ್ಚಕ ಬಳಗವು ಸ್ವಾಮಿಗೆ ವಿವಿಧ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿತು. ವಿವಿಧ ಬಗೆಯ ಪುಷ್ಪಗಳಿಂದ ಸ್ವಾಮಿಯನ್ನು ಅಲಂಕರಿಸಲಾಗಿತ್ತು. ಬೆಳಗ್ಗಿನಿಂದಲೇ ದೇವಸ್ಥಾನಕ್ಕೆ ಆಗಮಿಸಿದ ಭಕ್ತರು ಸರತಿ ಸಾಲಿನಲ್ಲಿ ನಿಂತು ಶ್ರದ್ಧಾಭಕ್ತಿಯಿಂದ ಸ್ವಾಮಿಯ ದರ್ಶನ ಪಡೆದು ಪುನೀತರಾದರು. ಸಂಜೆಯಾಗುತ್ತಿದ್ದಂತೆ ಅಲಂಕೃತ ಪಲ್ಲಕ್ಕಿಯಲ್ಲಿ ಕ್ರಿಯಾಮೂರ್ತಿ ಶಿವಪ್ರಕಾಶಸ್ವಾಮಿ ಹಾಗೂ ಧರ್ಮಕರ್ತರ ನೇತೃತ್ವದಲ್ಲಿ ಸ್ವಾಮಿಯ ಉತ್ಸವ ಮೂರ್ತಿಯನ್ನು ರಾಜಬಿರುದಾವಳಿಗಳೊಂದಿಗೆ ಪ್ರತಿಷ್ಠಾಪಿಸಲಾಯಿತು. ಬಳಿಕ ಸಕಲ ಮಂಗಳವಾದ್ಯಗಳ ನಿನಾದದೊಂದಿಗೆ ಆರಂಭಗೊಂಡ ಉತ್ಸವವು ರಥ-'ಬೀದಿಯಲ್ಲಿ ಸಾಗುತ್ತಾ ಬನ್ನಿಮಂಟಪವನ್ನು ತಲುಪಿತು. ಬನ್ನಿಮಂಟಪದ ಆವರಣದಲ್ಲಿ ಸ್ವಾಮಿಯ ಪಲ್ಲಕ್ಕಿಯನ್ನು ಪ್ರತಿಷ್ಠಾಪಿಸಿ ಶಮಿ ವೃಕ್ಷಕ್ಕೆ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅಪಾರ ಸಂಖ್ಯೆಯ ಭಕ್ತರು ಸ್ವಾಮಿಯ ಆಶೀರ್ವಾದ ಪಡೆದರು. ನಂತರ ಪರಸ್ಪರ ಬನ್ನಿ ಪತ್ರಿಯನ್ನು ವಿನಿಮಯ ಮಾಡಿಕೊಂಡು ವಿಜಯದಶಮಿ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಭಕ್ತಿ, ಸಂಪ್ರದಾಯ ಹಾಗೂ ಧಾರ್ಮಿಕ ಶ್ರದ್ಧೆಯ ಸಮ್ಮಿಲನದೊಂದಿಗೆ ಕೊಟ್ಟೂರು ಪಟ್ಟಣದಲ್ಲಿ ವಿಜಯದಶಮಿ ಹಬ್ಬವು ಸಂಭ್ರಮದಿಂದ ಜರುಗಿತ.

**ಪೂರ್ವಸಿದ್ಧತಾ ಸಭೆ**

## ವಿವಿಧ ಹೆದ್ದೆಗಳ ನೇಮಕಾತಿ ಪರೀಕ್ಷೆಗಳನ್ನು ಅಚ್ಚುಕಟ್ಟಾಗಿ ಹಮ್ಮಿಕೊಳ್ಳಿ : ಸಿದ್ರಾಮೇಶ್ವರ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಜಿಲ್ಲೆಯಲ್ಲಿ ಇದೇ ಅಕ್ಟೋಬರ್ 24 ರಿಂದ 27 ರವರೆಗೆ ನಡೆಯಲಿರುವ ವಿವಿಧ ಹುದ್ದೆಗಳ ನೇಮಕಾತಿ ಪರೀಕ್ಷೆಗಳನ್ನು ಅಚ್ಚುಕಟ್ಟಾಗಿ ಹಮ್ಮಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್‌ನ ಜೆ.ಹೆಚ್. ಪಾಟೀಲ್ ಸಭಾಂಗಣದಲ್ಲಿ ಗುರುವಾರ (ಅ. 22ರಂದು) ಹಮ್ಮಿಕೊಂಡಿದ್ದ ಪರೀಕ್ಷಾ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವತಿಯಿಂದ ಕಲ್ಯಾಣ ಕರ್ನಾಟಕ (ಕೆಕೆ) ಹಾಗೂ ಆರ್‌ಪಿಸಿ (ಆರ್.ಪಿ.ಸಿ) ವೃಂದದ ವಿವಿಧ ಹುದ್ದೆಗಳ ನೇಮಕಾತಿಗಾಗಿ ಅಕ್ಟೋಬರ್ 24 ರಿಂದ 27 ರವರೆಗೆ ನಡೆಯಲಿರುವ ಲಿಖಿತ ಪರೀಕ್ಷೆಗಳನ್ನು ಅತ್ಯಂತ ಶಾಂತಿಯುತ, ಪಾರದರ್ಶಕ ಹಾಗೂ ಕಟ್ಟುನಿಟ್ಟಾಗಿ ನಡೆಸಲು ಕೊಪ್ಪಳ ಜಿಲ್ಲಾಡಳಿತದಿಂದ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದರು.

ಪರೀಕ್ಷಾ ಕರ್ತವ್ಯವು ಅತ್ಯಂತ ಸೂಕ್ಷ್ಮ ಹಾಗೂ ಶಿಸ್ತಿನಿಂದ ಕೂಡಿದ ಕಾರ್ಯವಾಗಿದೆ. ನಿಯೋಜಿತ ಅಧಿಕಾರಿಗಳು ಹಾಗೂ ಸಿಬ್ಬಂದಿ ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದೆ, ಸರ್ಕಾರದ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಪ್ರಶ್ನೆಪತ್ರಿಕೆ ಸ್ವೀಕಾರ, ಸೀಲಿಂಗ್, ವಿತರಣೆ ಮತ್ತು ಪರೀಕ್ಷಾ ಕೇಂದ್ರಗಳ ಭದ್ರತೆಯಲ್ಲಿ ಗರಿಷ್ಠ ಮಟ್ಟದ ಎಚ್ಚರಿಕೆ ವಹಿಸಬೇಕು ಎಂದು ತಾಕೀತು ಮಾಡಿದರು. ಪರೀಕ್ಷೆಗಳಲ್ಲಿ ಯಾವುದೇ



ಅಕ್ರಮ ಅಥವಾ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಜಿಲ್ಲಾಧಿಕಾರಿಗಳ ಆದೇಶದಂತೆ ಎಲ್ಲಾ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಸಿಆರ್‌ಪಿಸಿ ಕಲಂ 163 ರ ಅನ್ವಯ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪ್ರತಿಯೊಂದು ಪರೀಕ್ಷಾ ಕೇಂದ್ರದಲ್ಲೂ ಸಿಸಿಟಿವಿ ಕ್ಯಾಮೆರಾಗಳ ಕಣ್ಗಾವಲು, ಲೈವ್ ವೆಬ್‌ಕಾಸ್ಟಿಂಗ್ ಸೌಲಭ್ಯ ಹಾಗೂ ಎಲೆಕ್ಟ್ರಾನಿಕ್ ಅಕ್ರಮಗಳನ್ನು ತಡೆಯಲು ಮೊಬೈಲ್ ಜಾಮರ್‌ಗಳನ್ನು ಅಳವಡಿಸಲಾಗಿದೆ. ನಕಲಿ ಅಭ್ಯರ್ಥಿಗಳ ಪ್ರವೇಶ ತಡೆಗಟ್ಟುವ ಉದ್ದೇಶದಿಂದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರ ನೇತೃತ್ವದಲ್ಲಿ 'ಫೇಸ್ ರೆಕಗ್ನಿಷನ್' ವ್ಯವಸ್ಥೆಯನ್ನು ಸಹ ಜಾರಿಗೊಳಿಸಲಾಗಿದೆ. ಇದಲ್ಲದೆ ಪರೀಕ್ಷಾ ಕೇಂದ್ರಗಳಿಗೆ ಸೂಕ್ತ ಪೊಲೀಸ್ ಹಾಗೂ ಎಸ್ಕಾರ್ಟ್ ಭದ್ರತೆ ನೀಡಲಾಗಿದೆ. ಪ್ರತಿ 100 ಜನ ಅಭ್ಯರ್ಥಿಗಳಿಗೆ ಒಬ್ಬ ಪೊಲೀಸ್ ಅಥವಾ ಗೃಹರಕ್ಷಕ ದಳದ (ಹೋಮ್‌ಗಾರ್ಡ್) ಸಿಬ್ಬಂದಿಯನ್ನು ದೇಹ ತಪಾಸಣೆಗೆ ನಿಯೋಜಿಸಲಾಗಿದ್ದು, ಮಹಿಳಾ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಮಹಿಳಾ ಸಿಬ್ಬಂದಿಯಿಂದ ತಪಾಸಣೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ರಾಜಶೇಖರ ಪಾಟೀಲ ಅವರು ಮಾತನಾಡಿ, ಅಕ್ಟೋಬರ್ 24ರಂದು ಮಧ್ಯಾಹ್ನ 3 ರಿಂದ ಸಂಜೆ 5 ಗಂಟೆಯವರೆಗೆ ಭೂಮಾಪನಾ ಅಧಿಕಾರಿ (ಕೆಕೆ) ಪರೀಕ್ಷೆ ನಡೆಯಲಿದ್ದು, ಕೊಪ್ಪಳ ನಗರದ 7 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 2,845 ಅಭ್ಯರ್ಥಿಗಳು ಈ ಪರೀಕ್ಷೆ ಬರೆಯಲಿದ್ದಾರೆ. ಅ. 25ರ ಬೆಳಿಗ್ಗೆ 10.30 ರಿಂದ 12.30 ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 04.30 ರವರೆಗೆ ಭೂಮಾಪನಾ ಅಧಿಕಾರಿ (ಕೆಕೆ) ಹಾಗೂ ಗ್ರಾಮ ಆಡಳಿತಾಧಿಕಾರಿ (ಕೆಕೆ) ಪರೀಕ್ಷೆಗಳು ಜಿಲ್ಲೆಯ ಕೊಪ್ಪಳ, ಗಂಗಾವತಿ ಮತ್ತು ಕುಕನೂರು ತಾಲೂಕುಗಳ 32 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಒಟ್ಟು 10,462 ಅಭ್ಯರ್ಥಿಗಳು ಹಾಜರಾಗಲಿದ್ದಾರೆ ಎಂದರು. ಇದೇ ರೀತಿ ಅ. 26ರಂದು ಬೆಳಿಗ್ಗೆ 10.30 ರಿಂದ 12:30 ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 4.30ರವರೆಗೆ ನರ್ಸಿಂಗ್ ಆಫೀಸರ್, ಫಾರ್ಮಸಿ ಆಫೀಸರ್, ಕೆಇಎ-ಎಸ್.ಡಿ.ಎ ಹಾಗೂ ಎಸ್.ಡಬ್ಲ್ಯೂ.ಡಿ-ಶಿಕ್ಷಕರ (ಆರ್.ಪಿ.ಸಿ) ಪರೀಕ್ಷೆಗಳು ಕೊಪ್ಪಳದ 5 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, 1,894 ಅಭ್ಯರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ. ಅ 27ರ ಮಧ್ಯಾಹ್ನ 3 ರಿಂದ ಸಂಜೆ 5 ಗಂಟೆಯವರೆಗೆ ಕೆಇಎ-ಎಸ್.ಡಿ.ಎ ಮತ್ತು ಎಸ್.ಡಬ್ಲ್ಯೂ.ಡಿ-ಶಿಕ್ಷಕರ (ಆರ್.ಪಿ.ಸಿ) ಪರೀಕ್ಷೆಗಳು ಕೊಪ್ಪಳದ 2 ಕೇಂದ್ರಗಳಲ್ಲಿ ನಡೆಯಲಿದ್ದು, ಒಟ್ಟು 725 ಅಭ್ಯರ್ಥಿಗಳು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಹೇಮಂತ್ ಕುಮಾರ್ ಸೇ-ರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾ-ರಿಗಳು, ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿತ ಶಿಕ್ಷಕರು ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

# ದಾವೂದ್ ಇಬ್ರಾಹಿಂನ 'ಡಿ ಕಂಪನಿ' ಭಾರತ ಮೂಲದ್ದಲ್ಲ ; ವಿಶ್ವಸಂಸ್ಥೆಯಲ್ಲಿ ರಘು ಪುರಿ ತಿರುಗೇಟು

ವಿಶ್ವಸಂಸ್ಥೆ: ಗ್ಯಾಂಗ್‌ಸ್ಟರ್ ದಾವೂದ್ ಇಬ್ರಾಹಿಂ ನೇತೃತ್ವದ ಡಿ-ಕಂಪನಿಯನ್ನು ಭಾರತ ಮೂಲದ ಅಪರಾಧ ಗುಂಪು ಎಂದು ವಿಶ್ವಸಂಸ್ಥೆಯ ವಿಶೇಷ ವರದಿಗಾರರು ಬಣ್ಣಿಸಿರುವುದನ್ನು ನವದೆಹಲಿ ಬಲವಾಗಿ ತಳ್ಳಿಹಾಕಿದೆ.

ವರದಿಯಲ್ಲಿನ ಸ್ಪಷ್ಟ ತಪ್ಪುಗಳನ್ನು ಎತ್ತಿ ತೋರಿಸಿರುವ ಭಾರತ, ಇಂತಹ ಅಸಮರ್ಥತೆಯು ವಿಶ್ವಸಂಸ್ಥೆಗೆ ಅಪಾರ ಹಾನಿಯನ್ನುಂಟುಮಾಡುತ್ತದೆ ಎಂದು ಎಚ್ಚರಿಸಿದೆ. ವಿಶ್ವಸಂಸ್ಥೆಯಲ್ಲಿನ ಭಾರತದ ಖಾಯಂ ನಿಯೋಗದ ಪ್ರಥ-'ಮ ಕಾರ್ಯದರ್ಶಿ ರಘು ಪುರಿ ಅವರು, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಮೂರನೇ ಸಮಿತಿಯಲ್ಲಿ ಈ ತೀಕ್ಷ್ಣ ಪ್ರತಿಕ್ರಿಯೆ ನೀಡಿದರು. ಭಯೋತ್ಪಾದನೆಯನ್ನು ಎದು-ರಿಸುವಾಗ ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳ ಪ್ರಚಾರ ಹಾಗೂ ರಕ್ಷಣೆಗೆ ಸಂಬಂಧಿಸಿದ ವಿಶೇಷ ವರದಿಗಾರ ಬೆನ್ ಸಾಲ್ ಅವರು ಸಲ್ಲಿಸಿದ ವರದಿಗೆ ಅವರು ಪ್ರತಿಕ್ರಿಯಿಸುತ್ತಿದ್ದರು. ವಿಶೇಷ ವರದಿಗಾರರು ವಾಸ್ತವಿಕ ತಪ್ಪುಗಳಿರುವ ವರದಿಗಳನ್ನು ಬಿಡುಗಡೆ ಮಾಡುವುದು ಮತ್ತು ಅದಕ್ಕೆ ಯಾವುದೇ ಹೊಣೆಗಾರಿಕೆಯನ್ನು ಹೊರದಿರುವುದು ಸ್ವೀಕಾರಾರ್ಹವಲ್ಲ. ಈ ಬಗ್ಗೆ ನಾವು ಇತರ ವೇದಿಕೆಗಳಲ್ಲಿಯೂ ನಮ್ಮ ಗಂಭೀರ ಕಳವಳವನ್ನು ವ್ಯಕ್ತಪಡಿಸುತ್ತಾ ಬಂದಿದ್ದೇವೆ




ಎಂದು ಪುರಿ ಹೇಳಿದರು.

ಇದು ಸದಸ್ಯ ರಾಷ್ಟ್ರಗಳ ಮುಂದೆ ಏನೂ ಬದಲಾಯಿಸಲಾಗದ ಸನ್ನಿವೇಶವನ್ನು ಸೃಷ್ಟಿಸುತ್ತದೆ. ಈಗಾಗಲೇ ತನ್ನ ನ್ಯಾಯಸಮ್ಮತತೆಯ ಬಗ್ಗೆ ಸವಾಲುಗಳನ್ನು ಎದುರಿಸುತ್ತಿರುವ ವಿಶ್ವಸಂಸ್ಥೆಯಂತಹ ಸಂಸ್ಥೆಗೆ ಇದು ದುರದೃಷ್ಟಕರ ಸಂಗತಿಯಾಗಿದೆ ಎಂದು ಅವರು ಹೇಳಿದರು. ಈ ಹಿನ್ನೆಲೆಯಲ್ಲಿ, ನನ್ನ ದೇಶಕ್ಕೆ ಸಂಬಂಧಿಸಿದಂತೆ ವರದಿಯಲ್ಲಿರುವ ಕೆಲವು ಸ್ಪಷ್ಟ ತಪ್ಪುಗಳನ್ನು ನಾವು ಎತ್ತಿ ತೋರಿಸಲು ಬಯಸುತ್ತೇವೆ ಎಂದು ಪುರಿ ಹೇಳಿದರು. ಬೆನ್ ಸಾಲ್ ಅವರ ವರದಿಯಲ್ಲಿ, 2003ರಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಭಾರತ ಮೂಲದ ಡಿ-ಕಂಪನಿ ಎಂಬ ಅಪರಾಧ ಗುಂಪಿನ ನಾಯಕನನ್ನು ಅಲ್-ಖೈದಾದೊಂದಿಗೆ ಸಂಪರ್ಕ ಹೊಂದಿದ್ದಕ್ಕಾಗಿ ಪಟ್ಟಿಗೆ ಸೇರಿಸಿದೆ ಎಂದು ಉಲ್ಲೇಖಿಸಲಾಗಿದೆ ಎಂಬುದನ್ನು ಅವರು ಗಮನಸೆಳೆದರು. ಈ ಸಾಲನ್ನು ಪ್ರತ್ಯೇಕವಾಗಿ ಓದಿದರೆ, ಅದು ವಾಸ್ತವಕ್ಕಿಂತ ಭಿನ್ನವಾದ ಚಿತ್ರಣವನ್ನು ನೀಡುತ್ತದೆ ಎಂದು ಪುರಿ ಹೇಳಿದರು. ಡಿ-ಕಂಪನಿಯನ್ನು ಭಾರತ ಮೂಲದ ಗುಂಪು ಎಂದು ಕರೆದಿರುವುದನ್ನು ಬಲವಾಗಿ ನಿರಾಕರಿಸಿದ ಪುರಿ, ಈ ಅಪರಾಧ ಸಂಘಟನೆ ಮತ್ತು ಅದರ ನಾಯಕ ದಾವೂದ್ ಇಬ್ರಾಹಿಂ 1993ರ ಭಯೋತ್ಪಾದಕ ದಾಳಿಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ಬೇಕಾದ ವ್ಯಕ್ತಿಗಳಾಗಿದ್ದಾರೆ ಎಂದು ಹೇಳಿದರು.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಲ್-ಖೈದಾ ನಿರ್ಬಂಧ ವ್ಯವಸ್ಥೆಯನ್ನು ಉಲ್ಲೇಖಿಸಿದ ಅವರು, 1267 ನಿರ್ಬಂಧ ವ್ಯವಸ್ಥೆಯ ಅಡಿಯಲ್ಲಿ ಪಟ್ಟಿಗೆ ಸೇರಿಸಲು ನೀಡಲಾದ ಕಾರಣಗಳ ಸಾರಾಂಶದಲ್ಲಿ ಇದನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ ಎಂದು ತಿಳಿಸಿದರು. ಈ ಸಂಗತಿಯನ್ನು ಉಲ್ಲೇಖಿಸದಿರುವುದು ವಿಷಾದನೀಯ. ವಿಶೇಷ ಜವಾಬ್ದಾರಿ ಹೊಂದಿರುವ ವ್ಯಕ್ತಿಗಳ ಇಂತಹ ಅಸಮರ್ಥತೆಯು ಈ ಸಂಸ್ಥೆಗೆ ಅಪಾರ ಹಾನಿಯನ್ನುಂಟುಮಾಡುತ್ತದೆ ಎಂದು ಪುರಿ ಹೇಳಿದರು.

ದಾಖಲೆಗಾಗಿ ನಾನು ಇದನ್ನು ಸರಿಪಡಿಸಲು ಬಯಸುತ್ತೇನೆ. ಈ ವ್ಯಕ್ತಿಯು 2003ರಲ್ಲಿ ಪಟ್ಟಿಗೆ ಸೇರ್ಪಡೆಗೊಳ್ಳುವ ಬಹಳ ಮೊದಲೇ ಭಾರತದಿಂದ ಪಲಾಯನ ಮಾಡಿದ್ದನು. ನಮ್ಮ ದೇಶದ ಹೊರಗಿದ್ದ ಆ ಅವಧಿಯಲ್ಲೇ ಅಲ್-ಖೈದಾ ಮತ್ತು ಒಸಾಮಾ ಬಿನ್ ಲಾಡೆನ್‌ನೊಂದಿಗೆ ಸಂಪರ್ಕ ಹೊಂದಿದ್ದಕ್ಕಾಗಿ ಆತನನ್ನು ಈ ಪಟ್ಟಿಗೆ ಸೇರಿಸಲಾಯಿತು ಎಂದು ಅವರು ಹೇಳಿದರು. ದಾವೂದ್ ಇಬ್ರಾಹಿಂ ಭಾರತದಲ್ಲಿ ಇನ್ನೂ ಬೇಕಾಗಿರುವ ಅಪರಾಧಿಯಾಗಿದ್ದಾನೆ. ವಿಶ್ವಸಂಸ್ಥೆಯ ಪಟ್ಟಿಯ ಪ್ರಕಾರ, ಅಲ್-ಖೈದಾ ನಾಯಕ ಒಸಾಮಾ ಬಿನ್ ಲಾಡೆನ್ ಪತ್ತೆಯಾದ ಮತ್ತು ಹತ್ಯೆಗೀಡಾದ ಅದೇ ದೇಶದಲ್ಲಿ ದಾವೂದ್ ಕೂಡ ವಾಸಿಸುತ್ತಿದ್ದಾನೆ ಎಂದು ಪುರಿ ಹೇಳಿದರು. ಇದು ಪಾಕಿಸ್ತಾನವನ್ನು ಸ್ಪಷ್ಟವಾಗಿ ಉಲ್ಲೇಖಿಸುತ್ತದೆ.

## ಚುನಾವಣೆ ಇಲ್ಲದೆ ಸರ್ಕಾರ ಬದಲಿಸಲು ರಾಹುಲ್ ಗಾಂಧಿ ವಿದೇಶದಲ್ಲಿ ಕೋಚಿಂಗ್ ಪಡೆಯುತ್ತಿರಬಹುದು : ಪಾತ್ರ ಲೇವಡಿ



ಭುವನೇಶ್ವರ: ಪದೇ ಪದೇ ವಿದೇಶ ಪ್ರವಾಸ ಮಾಡುವ ರಾಹುಲ್ ಗಾಂಧಿ ಅವರು, ಚುನಾವಣೆ ನಡೆಸದೆಯೇ ಸರ್ಕಾರವನ್ನು ಬದಲಾಯಿಸುವುದು ಹೇಗೆ ಎಂಬ ಬಗ್ಗೆ ಅಲ್ಲಿಂದ ಮಾರ್ಗದರ್ಶನ ಪಡೆಯುತ್ತಿರಬಹುದು ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ ಲೇವಡಿ ಮಾಡಿದ್ದಾರೆ.ರಾಹುಲ್ ಗಾಂಧಿ ಅವರು ಚುನಾವಣೆಗಳಿಲ್ಲದೆಯೇ ಸರ್ಕಾರವನ್ನು ಬದಲಾಯಿಸಲು ವಿದೇಶದಿಂದ ಮಾರ್ಗದರ್ಶನ ಪಡೆಯುತ್ತಿದ್ದಾರೆ ಮತ್ತು ಪಿತೂರಿ ನಡೆಸುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಕಾಂಗ್ರೆಸ್ ದೇಶದಲ್ಲಿ ಅಶಾಂತಿಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ ಅವರು, ಈ ಹಿಂದೆ ಹಲವು ಬಾರಿ ವಿಫಲರಾಗಿರುವ ರಾಹುಲ್ ಗಾಂಧಿ ಅವರನ್ನು ಮತ್ತೆ ಮುನ್ನೆಲೆಗೆ ತರಲು ದೇಶದಲ್ಲಿ ಅರಾಜಕತೆಯನ್ನು ಹರಡಲು ಪ್ರಯತ್ನಿಸಲಾಗುತ್ತಿದೆ ಎಂದು ದೂರಿದರು. ಭಾರತದಲ್ಲಿ ಅಸ್ಥಿರತೆಯನ್ನು ಉಂಟುಮಾಡಲು ಮತ್ತು ಚುನಾವಣೆ ನಡೆಸದೆಯೇ ಸರ್ಕಾರವನ್ನು ಬದಲಾಯಿಸಲು ಬಿಲಿಯನೇರ್ ಹೂಡಿಕೆದಾರ ಜಾರ್ಜ್ ಸೊರೊಸ್ ಮತ್ತು ಅವರ ಸಹಚರರಿಂದ ಮಾರ್ಗದರ್ಶನ ಪಡೆಯಲು ರಾಹುಲ್ ಗಾಂಧಿ ವಿದೇಶಕ್ಕೆ ಪ್ರಯಾಣಿಸಿದ್ದರು ಎಂದು ಬಿಜೆಪಿ ನಾಯಕ ಆರೋಪಿಸಿದರು. ನೇಹಾ ಬೋರಾ, ಪ್ರಶಾಂತ್ ಭೂಷಣ್ ಮತ್ತು ಸಂಜಯ್ ರಾವುತ್ ಅವರು ತಮ್ಮ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ. ಸರ್ಕಾರ ಬದಲಾವಣೆಯೇ ಅವರ ಗುರಿಯಾಗಿದೆ. ಇದಕ್ಕಾಗಿ ಹಿಂಸಾಚಾರ ಅಗತ್ಯವೆಂದಾದರೆ ಅದಕ್ಕೂ ಬೆಂಬಲ ನೀಡಲು ಕೆಲವರು ಮುಂದೆ ಬಂದಿದ್ದಾರೆ ಎಂದು ಪಾತ್ರ ಹೇಳಿದರು. ಕಾಂಗ್ರೆಸ್ ಮತ್ತು ಅದರ ಸಹಚರರನ್ನು ಭಾರತದ ಶತ್ರುಗಳು ಎಂದು ಕರೆದ ಬಿಜೆಪಿ ನಾಯಕ, ಅವರು ನವೆಂಬರ್ 1ರಂದು ರಾಮ್‌ಲೀಲಾ ಮೈದಾನದಲ್ಲಿ ರ್ಯಾಲಿಯೊಂದನ್ನು ಆಯೋಜಿಸಲು ಯೋಜಿಸಿದ್ದಾರೆ ಎಂದು ಹೇಳಿದರು. ಗಮನಾರ್ಹವೆಂದರೆ, 1984ರ ನವೆಂಬರ್ 1ರಂದು ಸಿಖ್ ವಿರೋಧಿ ಗಲಭೆಗಳು ನಡೆದಿದ್ದವು. ಸಿಖ್ ಸಮುದಾಯವು ಇವರಿಗೆ ತಕ್ಕ ಉತ್ತರ ನೀಡಲಿದೆ ಎಂದು ಪಾತ್ರ ಹೇಳಿದರು.ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ವಿಜಯದಶಮಿ ಭಾಷಣದಲ್ಲಿ ಅತ್ಯಂತ ಪ್ರಮುಖ ಸಂದೇಶವೊಂದನ್ನು ನೀಡಿದ್ದಾರೆ ಎಂದು ಪಾತ್ರ ಉಲ್ಲೇಖಿಸಿದರು. ರಾಷ್ಟ್ರದ ಗೌರವಕ್ಕೆ ಧಕ್ಕೆ ತರುವವರು, ಅದರ ಘನತೆಯನ್ನು ಕುಗ್ಗಿಸುವವರು, ದೇಶವನ್ನು ವಿಭಜಿಸಲು ಪ್ರಯತ್ನಿಸುವವರು ಹಾಗೂ ಭಾರತದ ಸಂಸ್ಕೃತಿ ಮತ್ತು ಭಾರತವನ್ನೇ ದ್ವೇಷಿಸುವವರು ರಾಷ್ಟ್ರದ ಶತ್ರುಗಳು ಎಂದು ಪ್ರಧಾನಿ ಹೇಳಿದ್ದರು. ಭಾರತದಲ್ಲಿ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರವನ್ನು ಹೇಗೆ ಕಿತ್ತೊಗೆಯಬೇಕು ಎಂಬುದರ ಕುರಿತು ನಿರ್ದೇಶನ ಪಡೆಯಲು ವಿದೇಶಕ್ಕೆ ಪ್ರಯಾಣಿಸುವವರೇ ಈ ಶತ್ರುಗಳು ಎಂದು ಪ್ರಧಾನಿ ನಿನ್ನೆ ಸ್ಪಷ್ಟಪಡಿಸಿದ್ದಾರೆ ಎಂದು ಅವರು ಹೇಳಿದರು.

## ಫ್ರಾನ್ಸ್‌ನಲ್ಲಿ ಅಶಾಂತಿ, ಕರ್ಫ್ಯೂ : ಎಚ್ಚರಿಕೆಯಿಂದಿರುವಂತೆ ಭಾರತೀಯರಿಗೆ ರಾಯಭಾರ ಕಚೇರಿ ಸೂಚನೆ



ಲಂಡನ್: ಫ್ರಾನ್ಸ್‌ನ ವಿವಿಧ ಭಾಗಗಳಲ್ಲಿ ಮುಂದುವರಿದಿರುವ ಪ್ರತಿಭಟನೆಗಳು, ಹಿಂಸಾತ್ಮಕ ಘರ್ಷಣೆಗಳು ಹಾಗೂ ಸ್ಥಳೀಯ ಕರ್ಫ್ಯೂ ಹಿನ್ನೆಲೆಯಲ್ಲಿ, ಅಲ್ಲಿ ವಾಸಿಸುತ್ತಿರುವ ಮತ್ತು ಅಲ್ಲಿಗೆ ಪ್ರಯಾಣಿಸುವ ಭಾರತೀಯರು ಎಚ್ಚರಿಕೆಯಿಂದ ಇರುವಂತೆ ಭಾರತ ಸರ್ಕಾರ ಸೂಚಿಸಿದೆ.

ಫ್ರಾನ್ಸ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ನೀಡಿರುವ ಸಲಹೆಯಲ್ಲಿ, ಪ್ರತಿಭಟನೆಗಳು ನಡೆಯುತ್ತಿರುವ ಪ್ರದೇಶಗಳಲ್ಲಿ ದೊಡ್ಡ ಗುಂಪುಗಳು ಮತ್ತು ಜನಸಂದಣಿ ಇರುವ ಸ್ಥಳಗಳಿಗೆ ಹೋಗದಂತೆ ಭಾರತೀಯರಿಗೆ ಸೂಚಿಸಿದೆ. ಅಲ್ಲದೆ, ಸ್ಥಳೀಯ ಆಡಳಿತ ನೀಡುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಿದೆ. ಫ್ರಾನ್ಸ್‌ನಲ್ಲಿನ ಇತ್ತೀಚಿನ ಬೆಳವಣಿಗೆಗಳು ಮತ್ತು ಕೆಲವು ಪ್ರದೇಶಗಳಲ್ಲಿ ಸ್ಥಳೀಯ ಕರ್ಫ್ಯೂ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ, ಭಾರತೀಯರು ಎಚ್ಚರಿಕೆಯಿಂದಿದ್ದು, ಸೂಕ್ತ ಮುನ್ನೆಚ್ಚ-ರಿಕೆ ವಹಿಸಬೇಕು ಎಂದು ರಾಯಭಾರ ಕಚೇರಿ ತಿಳಿಸಿದೆ. ಸ್ಥಳೀಯ ಸುದ್ದಿಗಳು ಹಾಗೂ ಫ್ರಾನ್ಸ್ ಸರ್ಕಾರದ ಅಧಿಕೃತ ವೆಬ್‌ಸೈಟ್‌ನಲ್ಲಿನ ಮಾಹಿತಿಯನ್ನು ನಿಯಮಿತವಾಗಿ ಪರಿಶೀಲಿಸುವಂತೆ ಭಾರತೀಯ-ರಿಗೆ ಸಲಹೆ ನೀಡಲಾಗಿದೆ. ಪ್ಯಾರಿಸ್ ಪ್ರದೇಶದ ಸಾರ್ವಜನಿಕ ಸಾರಿಗೆ ಸೇವೆಗಳ ಕುರಿತು ಮಾಹಿತಿಗಾಗಿ ಸಂಬಂಧಿತ ವೆಬ್‌ಸೈಟ್ ಪರಿಶೀಲಿಸುವಂತೆಯೂ ಸೂಚಿಸಲಾಗಿದೆ. ತುರ್ತು ಪರಿಸ್ಥಿತಿಯಲ್ಲಿ ಪ್ಯಾರಿಸ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಅಥವಾ ಮಾರ್ಸೆಲ್ಲೆಯಲ್ಲಿರುವ ಭಾರತೀಯ ಕಾನ್ಸುಲೇಟ್ ಜನರಲ್ ಅನ್ನು ಸಂಪರ್ಕಿಸಬಹುದು ಎಂದು ತಿಳಿಸಲಾಗಿದೆ. ಮಾಧ್ಯಮ ವರದಿಗಳ ಪ್ರಕಾರ, ವಾರಾಂತ್ಯದಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ 2,400ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದ್ದು, ಸುಮಾರು 1,000 ಪೊಲೀಸ್ ಅಧಿಕಾರಿಗಳು ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇಂತಹ ಹಿಂಸಾಚಾರ ಮರುಕಳಿಸದಂತೆ ಕ್ರಮ ಕೈಗೊಳ್ಳುವುದಾಗಿ ಫ್ರಾನ್ಸ್ ಅಧ್ಯಕ್ಷ ಎಮ್ಮಾನುಯೆಲ್ ಮ್ಯಾಕ್ರೋನ್ ಭರವಸೆ ನೀಡಿದ್ದಾರೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ಬೆಂಗಳೂರಿನ ಬೃಹತ್ ಯೋಜನೆಗಳಿಗೆ ಎದುರಾಯ್ತು ವಿಘ್ನ

ಬೆಂಗಳೂರು: ನಗರದ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಮೇಲ್ಸೇತುವೆ ಮತ್ತು ಎಲಿವೇಟೆಡ್ ಕಾ-ರಿಡಾರ್ ಯೋಜನೆಗಳ ಟೆಂಡರ್ ಪ್ರಕ್ರಿಯೆಗೆ ಮತ್ತೆ ವಿಘ್ನ ಎದುರಾಗಿದೆ. ಪ್ರಮಾಣಿತ ಗುತ್ತಿಗೆ ನಿಯಮಗಳನ್ನು ಪಾಲಿಸದಿರುವುದನ್ನು ಉಲ್ಲೇಖಿಸಿ ಬಿಡ್‌ಗಳನ್ನು ಪರಿಷ್ಕರಿಸುವಂತೆ ನಗರಾಭಿವೃದ್ಧಿ ಇಲಾಖೆ (ಯುಡಿಡಿ) ಸೂಚನೆ ನೀಡಿದ ಹಿನ್ನೆಲೆಯಲ್ಲಿ, ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ-ಸ್ಮೈಲ್) ಆರು ಪ್ರಮುಖ ಯೋಜನೆಗಳಿಗೆ ಮರು ಟೆಂಡರ್ ಕರೆದಿದೆ.ನಕ್ಷೆಗಳನ್ನು ನೋಡಿ ಟಕೊಣನಕುಂಟೆ ಕ್ರಾಸ್, ಎಂಇಐ ಜಂಕ್ಷನ್, ಪೈಪ್‌ಲೈನ್ ರಸ್ತೆ, ಕೋಗಿಲು ಕ್ರಾಸ್ ಸೇರಿದಂತೆ ಆರು ಯೋಜನೆಗಳಿಗೆ ಸಂಬಂಧಿಸಿದಂತೆ ಹೊಸದಾಗಿ ಟೆಂಡರ್ ಆಹ್ವಾನಿಸಲಾಗಿದೆ. ಈ ಯೋಜನೆಗಳ ಅಂದಾಜು ವೆಚ್ಚದ ಮೊತ್ತಗಳು ಒಟ್ಟಾರೆ ಸುಮಾರು 2,564 ಕೋಟಿ ಆಗುತ್ತವೆ. ಕೋಗಿಲು ಕ್ರಾಸ್‌ನ ಎಲಿವೇಟೆಡ್ ಕಾ-ರಿಡಾರ್ ಯೋಜನೆಯೊಂದಕ್ಕೇ 1,026.66 ಕೋಟಿ ವೆಚ್ಚ ಎಂದು ಅಂದಾಜಿಸಲಾಗಿದೆ. ಉಳಿದಂತೆ ಶೂಳೇ ಸರ್ಕಲ್‌ನಿಂದ ಸೇಂಟ್ ಜಾನ್?ಸ ಆಸ್ಪತ್ರೆ ರಸ್ತೆ ಹಾಗೂ ಮಿನರ್ವ ಸರ್ಕಲ್‌ನಿಂದ ಹಡ್ಸನ್ ಸರ್ಕಲ್‌ವರೆಗಿನ ಕಾರಿಡಾರ್‌ಗಳೂ ಪ್ರಮುಖ ಯೋಜನೆಗಳಾಗಿವೆ.

ಆರು ಯೋಜನೆಗಳಿಗೆ ಮರು ಟೆಂಡರ್ :ಕನಕಪುರ ರಸ್ತೆಯ ಕೊಣನಕುಂಟೆ ಕ್ರಾಸ್‌ನಲ್ಲಿ 76.76 ಕೋಟಿ ವೆಚ್ಚದಲ್ಲಿ ಮೇಲ್ಸೇತುವೆ ನಿರ್ಮಾಣ, ತುಮಕೂರು ರಸ್ತೆಯ ಎಂಇಐ ಜಂಕ್ಷನ್‌ನಲ್ಲಿ 41.62 ಕೋಟಿ ವೆಚ್ಚದಲ್ಲಿ ವಿಭಜಿತ ಮೇಲ್ಸೇತುವೆ ನಿರ್ಮಾಣಕ್ಕೆ ಮರು ಟೆಂಡರ್ ಕರೆಯಲಾಗಿದೆ. ಪೈಪ್‌ಲೈನ್ ರಸ್ತೆಯಲ್ಲಿ 315.28 ಕೋಟಿ ವೆಚ್ಚದ ಗ್ರೇಡ್ ಸೆಪರೇಟರ್ ಹಾಗೂ ದೊಡ್ಡಬಳ್ಳಾಪುರ ರಸ್ತೆಯ ಕೋಗಿಲು ಕ್ರಾಸ್‌ನಲ್ಲಿ 1,026.66 ಕೋಟಿ ವೆಚ್ಚದ ಎಲಿವೇಟೆಡ್ ಕಾರಿಡಾರ್ ನಿರ್ಮಾಣವೂ ಈ ಪಟ್ಟಿಯಲ್ಲಿವೆ. ಇದರ ಜತೆಗೆ ಶೂಳೇ ಸರ್ಕಲ್‌ನಿಂದ ಸೇಂಟ್ ಜಾನ್?ಸ ಆಸ್ಪತ್ರೆ ರಸ್ತೆಯವರೆಗೆ 564 ಕೋಟಿ ಹಾಗೂ ಮಿನರ್ವ ಸರ್ಕಲ್‌ನಿಂದ ಹಡ್ಸನ್ ಸರ್ಕಲ್‌ವರೆಗೆ 539.94 ಕೋಟಿ ವೆಚ್ಚದ ಕಾರಿಡಾರ್‌ಗಳಿಗೂ ಹೊಸದಾಗಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆಯಲ್ಲಿನ ನಿಯಮ ಪಾಲನೆಗೆ ಸಂಬಂಧಿಸಿದ ಇಲಾಖೆಯ ಆಕ್ಷೇಪಗಳ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. 11 ಯೋಜನೆಗಳಿಗೆ ಸಂಪುಟ ಅನುಮೋದನೆ;ರಾಜಧಾನಿಯ ಪ್ರಮುಖ ರಸ್ತೆಗಳಲ್ಲಿ ವಾಹನ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ರಾಜ್ಯ ಸಚಿವ ಸಂಪುಟವು ಏಪ್ರಿಲ್‌ನಲ್ಲಿ ಒಟ್ಟು 11 ಫ್ಲೈ ಓವರ್ ಮತ್ತು ಎಲಿವೇಟೆಡ್ ಕಾ-ರಿಡಾರ್ ಯೋಜನೆಗಳಿಗೆ ಅನುಮೋದನೆ ನೀಡಿತ್ತು. ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 75.60 ಕಿ.ಮೀ. ಉದ್ದದ ರಸ್ತೆ ಮತ್ತು ಎಲಿವೇಟೆಡ್ ಕಾರಿಡಾರ್‌ಗಳನ್ನು ಒಳಗೊಂಡ ಈ ಯೋಜನೆಗಳಿಗೆ ಒಟ್ಟು 13,262 ಕೋಟಿ ವೆಚ್ಚ ಅಂದಾಜಿಸಲಾಗಿದೆ.

ಆದರೆ, ಟೆಂಡರ್ ನಿಯಮಗಳ ಪಾಲನೆ ವಿಚಾರದಿಂದಾಗಿ ಕೆಲವು ಯೋಜನೆಗಳ ಪ್ರಕ್ರಿಯೆ ಮತ್ತೆ ಆರಂಭಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನೂ ಮೂರು



ಯೋಜನೆಗಳಿಗೆ ಒಂದು ವಾರದೊಳಗೆ ಹೊಸದಾಗಿ ಬಿಡ್‌ಗಳನ್ನು ಆಹ್ವಾನಿಸುವ ನಿರೀಕ್ಷೆಯಿದೆ. ಇಂದಿರಾನಗರದ 100 ಅಡಿ ರಸ್ತೆಯಲ್ಲಿನ ಫ್ಲೈ ಓವರ್, ಸಿರ್ಸಿ ಸರ್ಕಲ್‌ನಿಂದ ನಾಯಂಡಹಳ್ಳಿವರೆಗೆ 5.2 ಕಿ.ಮೀ. ಉದ್ದದ ಕಾರಿಡಾರ್ ಹಾಗೂ ಕನಕಪುರ ರಸ್ತೆಯಲ್ಲಿನ ಕಿರು ಫ್ಲೈ ಓವರ್ ಈ ಪಟ್ಟಿಯಲ್ಲಿವೆ. ಟೋಲ್ ಕಾರಿಡಾರ್‌ಗಳ ಟೆಂಡರ್ ಪ್ರಕ್ರಿಯೆ;

ಇನ್ನೊಂದೆಡೆ, ಟೋಲ್ ಸಂಗ್ರಹದ ಉದ್ದೇಶ ಹೊಂದಿರುವ ಎರಡು ಉದ್ದನೆಯ ಎಲಿವೇಟೆಡ್ ಕಾರಿಡಾರ್‌ಗಳ ಟೆಂಡರ್ ಪ್ರಕ್ರಿಯೆಯೂ ನಡೆಯುತ್ತಿದೆ. ಮೊದಲ ಕಾರಿಡಾರ್ ಮರೆನಹಳ್ಳಿ ಮುಖ್ಯ ರಸ್ತೆಯ ರಾಗಿಗುಡ್ಡ ಜಂಕ್ಷನ್‌ನಿಂದ ಬಿಡಬ್ಲ್ಯ-ಎಸ್‌ಎಸ್‌ಬಿ ಪೈಪ್‌ಲೈನ್ ರಸ್ತೆಯ ಮೂಲಕ ಕನಕಪುರ ಮುಖ್ಯ ರಸ್ತೆಯನ್ನು ಸಂಪರ್ಕಿಸುವ ಉದ್ದೇಶ ಹೊಂದಿದೆ. ಮತ್ತೊಂದು ಕಾರಿಡಾರ್ ಯಶವಂತಪುರದ ಮತಿಕೆರೆ ಕ್ರಾಸ್‌ನಿಂದ ಐಐಎಸ್‌ಸಿ, ಮೇಖ್ರಿ ಸರ್ಕಲ್, ಜಯಮಹಲ್, ಸೇಂಟ್ ಜಾನ್ಸ್ ಚರ್ಚ್ ರಸ್ತೆ ಹಾಗೂ ಉಲ್ಸೂರು ಕೆರೆಯ ಮೂಲಕ ಹಳೆ ಮದ್ರಾಸ್ ರಸ್ತೆಯನ್ನು ಸಂಪರ್ಕಿಸಲಿದೆ.

**ಸ್ಥಳೀಯರ ವಿರೋಧವೂ ಸವಾಲು;**

ನಗರದ ಸಂಚಾರ ಸಮಸ್ಯೆ ಪರಿಹರಿಸುವ ಉದ್ದೇಶ ಹೊಂದಿರುವ ಕೆಲವು ಯೋಜನೆಗಳಿಗೆ ಸ್ಥಳೀಯ ನಿವಾಸಿಗಳಿಂದಲೇ ವಿರೋಧ ವ್ಯಕ್ತವಾಗಿದೆ. ಇಂದಿರಾನಗರದ ಫ್ಲೈ ಓವರ್ ಹಾಗೂ ರಾಗಿಗುಡ್ಡದಿಂದ ಕನಕಪುರ ಮುಖ್ಯ ರಸ್ತೆಯನ್ನು ಸಂಪರ್ಕಿಸುವ ಕಾರಿಡಾರ್ ಯೋಜನೆಗಳನ್ನು ಕೈಬಿಡಬೇಕೆಂದು ನಿವಾಸಿಗಳು ಒತ್ತಾಯಿಸಿದ್ದಾರೆ. ಇತ್ತೀಚೆಗೆ ಮಾನವ ಸರಪಳಿ ರಚಿಸಿ ಪ್ರತಿಭಟನೆಯನ್ನೂ ನಡೆಸಿದ್ದಾರೆ.ಒಂದೆಡೆ ಟೆಂಡರ್ ನಿಯಮಗಳ ಪಾಲನೆ ವಿಚಾರವಾಗಿ ಮರು ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದರೆ, ಮತ್ತೊಂದೆಡೆ ಸ್ಥಳೀಯರ ಆಕ್ಷೇಪಗಳು ಯೋಜನೆಗಳ ಅನುಷ್ಠಾನಕ್ಕೆ ಸವಾಲಾಗಿವೆ. ಹೀಗಾಗಿ, ಸಂಚಾರ ದಟ್ಟಣೆ ನಿವಾರಣೆಯ ಮಹತ್ವಾಕಾಂಕ್ಷೆಯ ಯೋಜನೆಗಳು ಯಾವಾಗ ಕಾರ್ಯರೂಪಕ್ಕೆ ಬರಲಿವೆ ಎಂಬುದು ಈಗ ಕುತೂಹಲ ಮೂಡಿಸಿದೆ.

# ಶಿಕ್ಷಕ-ಪದವೀಧರ ಕ್ಷೇತ್ರದ ಚುನಾವಣೆಗೆ ಕ್ಷಣಗಣನೆ : ಆಡಳಿತ, ಪ್ರತಿಪಕ್ಷಗಳ ನಡುವೆ ಪೈಪೋಟಿ

ಬೆಂಗಳೂರು: ಆಡಳಿತಾರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷಗಳ ನಡುವಿನ ಪ್ರತಿಷ್ಠೆಯ ಕಣವಾಗಿರುವ ವಿಧಾನ ಪರಿಷತ್ತಿನ ಎರಡು ಶಿಕ್ಷಕರ ಹಾಗೂ ಎರಡು ಪದವೀಧರ ಕ್ಷೇತ್ರಗಳ ಚುನಾವಣೆಯ ಮತದಾನ ನಾಳೆ ನಡೆಯಲಿದ್ದು, ಚುನಾವಣಾ ಆಯೋಗ ಸಕಲ ರೀತಿಯಲ್ಲಿ ಸಜ್ಜಾಗಿದೆ.

ಬೆಂಗಳೂರು ಶಿಕ್ಷಕರ, ಈಶಾನ್ಯ ಶಿಕ್ಷಕರ, ಪಶ್ಚಿಮ ಪದವೀಧರ ಹಾಗೂ ಆಗ್ನೇಯ ಪದವೀಧರ ಕ್ಷೇತ್ರಗಳ ವ್ಯಾಪ್ತಿಯ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿನ ಮತಗಟ್ಟೆಗಳಲ್ಲಿ ನಾಳೆ ಬೆಳಿಗ್ಗೆ 8 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ. ಶಿಕ್ಷಕ ಹಾಗೂ ಪದವೀಧರ ಮತದಾರರು ಒಟ್ಟು 43 ಅಭ್ಯರ್ಥಿಗಳ ಭವಿಷ್ಯವನ್ನು ನಾಳೆ ಬರೆಯಲಿದ್ದಾರೆ. ಲೋಕಸಭೆ ಚುನಾವಣೆಯಂತೆ ವಿಧಾನ ಪರಿಷತ್ತಿನ ಈ ಚುನಾವಣೆಯಲ್ಲೂ ಬಿಜೆಪಿ ಮತ್ತು ಜೆಡಿ-ಎಸ್ ಮೈತ್ರಿ ಮಾಡಿಕೊಂಡಿದ್ದು, ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಸ್ಪರ್ಧಿಸಿದ್ದರೆ, ಉಳಿದ ಮೂರು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು



ಸ್ಪರ್ಧಿಸಿದ್ದಾರೆ.

ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಮಾಜಿ ಉಪ ಸಭಾಪತಿ ಪುಟ್ಟಣ್ಣ, ಜೆಡಿಎಸ್‌ನಿಂದ ಎ.ಪಿ.ರಂಗನಾಥ ಸೇರಿದಂತೆ ಒಟ್ಟು ಆರು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಶರಣಪ್ಪ ಮಟ್ಟೂರು, ಬಿಜೆಪಿಯಿಂದ ಶಶೀಲ್ ಜಿ.ನಮೋಶಿ ಸೇರಿದಂತೆ ಒಟ್ಟು 13 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ.

ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಶಶಿ ಹುಲಿಕುಂಟೆಮಠ್, ಬಿಜೆಪಿಯಿಂದ ಕೆ.ಎಂ.ಸುರೇಶ ಅವರು ಸೇರಿದಂತೆ 10 ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ. ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಮೋಹನ ಲಿಂಬಿಕಾಯಿ, ಬಿಜೆಪಿಯಿಂದ ಸಂಕನೂರ ಎಸ್.ವಿ. ಸೇರಿದಂತೆ ಒಟ್ಟು 14 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ. ಪದವೀಧರ ಮತ್ತು ಶಿಕ್ಷಕ ಮತದಾರರು ಈ ಚುನಾವಣೆಯಲ್ಲಿ ಪ್ರಾಶಸ್ತ್ಯದ ಮತ ಚಲಾವಣೆ ಮಾಡಬೇಕಾಗಿದೆ. ಅ.27ರಂದು ನಾಲ್ಕು ಕ್ಷೇತ್ರಗಳ ಮತ ಎಣಿಕೆ ನಡೆಯಲಿದ್ದು, ಅಂ-ದು ಸಂಜೆ ವೇಳೆಗೆ ಫಲಿತಾಂಶ ಪ್ರಕಟವಾಗುವ ಸಾಧ್ಯತೆಗಳಿವೆ.

ವಿಧಾನ ಪರಿಷತ್ ಸದಸ್ಯರಾದ ಚಿದಾನಂದ ಎಂ.ಗೌಡ, ಸಂಕನೂರ ಎಸ್.ವಿ., ಶಶೀಲ್ ಜಿ.ನಮೋಶಿ, ಪುಟ್ಟಣ್ಣ ಅವರು ನವೆಂಬರ್ 11ರಂದು ವಿಧಾನ ಪರಿಷತ್ ಸದಸ್ಯ ಸ್ಥಾನದಿಂದ ನಿವೃತ್ತಿಯಾಗಲಿದ್ದು, ಇವರ ನಿವೃತ್ತಿಯಿಂದ ತೆರವಾಗುವ ಸ್ಥಾನಗಳಿಗೆ ಚುನಾವಣಾ ಆಯೋಗ ಚುನಾವಣೆ ನಡೆಸುತ್ತಿದೆ. ಅಕ್ಟೋಬರ್ 31ರೊಳಗೆ ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗಲಿದ್ದು, ಚುನಾವಣಾ ನೀತಿ ಸಂಹಿತೆಯು ಅಂತ್ಯಗೊಳ್ಳಲಿದೆ.

# ತೋಂಟದ ಸಿದ್ಧಲಿಂಗ ಶ್ರೀಗಳು : ಮಾನವೀಯತೆಯ ಬೆಳಕು

ಕನ್ನಡ ನಾಡಿನ ಸಾಂಸ್ಕೃತಿಕ ಚೇತನ, ಬಸವತತ್ವದ ನಿಷ್ಠಾವಂತ ಪ್ರಚಾರಕ, ಕೋಮು ಸೌಹಾರ್ದತೆಯ ಹರಿಕಾರ, ಸಾಮಾಜಿಕ ನ್ಯಾಯದ ಪ್ರತಿಪಾದಕ ಹಾಗೂ ಪರಿಸರ ಸಂರಕ್ಷಣೆಯ ಹೋರಾಟಗಾರರೆಂದೇ ಪ್ರಸಿದ್ಧರಾದ ಪೂಜ್ಯ ಲಿಂಗೈಕ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಕರ್ನಾಟಕದ ಜನಮಾನಸದಲ್ಲಿ ಅಚ್ಚಳಿಯದ ಛಾಪು ಮೂಡಿಸಿದ ಮಹಾನ್ ಚೇತನ. ಶಿಕ್ಷಣ, ಆರೋಗ್ಯ, ಅನ್ನದಾಸೋಹ, ಸಾಹಿತ್ಯ, ಧಾರ್ಮಿಕ ಸಾಮರಸ್ಯ ಮತ್ತು ಸಾಮಾಜಿಕ ಪರಿವರ್ತನೆಗಾಗಿ ತಮ್ಮ ಬದುಕನ್ನೇ ಸಮರ್ಪಿಸಿಕೊಂಡ ಶ್ರೀಗಳು ಕೇವಲ ಮಠದ ಪೀಠಾಧಿಪತಿಗಳಾಗಿರಲಿಲ್ಲ; ಜನಸಾಮಾನ್ಯರ ನೋವುಗಳಿಗೆ ಸ್ಪಂದಿಸಿದ ಮಾನವೀಯತೆಯ ಪ್ರತೀಕವಾಗಿದ್ದರು. ಅವರ ಎಂಟನೇ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಅವರ ಆದರ್ಶಗಳನ್ನು ಸ್ಮರಿಸುವುದರ ಜೊತೆಗೆ ಅವುಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ನಿಜವಾದ ಗೌರವವಾಗಿದೆ.



1949ರ ಫೆಬ್ರವರಿ 29ರಂದು ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಕೊರವಾರದಲ್ಲಿ ಜನಿಸಿದ ಸಿದ್ಧಲಿಂಗ ಶ್ರೀಗಳು 1974ರಲ್ಲಿ ಗದಗದ ತೋಂಟದಾರ್ಯ ಮಠದ 19ನೇ ಪೀಠಾಧಿಪತಿಗಳಾಗಿ ಅಧಿಕಾರ ಸ್ವೀಕರಿಸಿದರು. ಅಂದಿನಿಂದ ತಮ್ಮ ಬದುಕಿನ ಕೊನೆಯವರೆಗೂ ಸಮಾಜಮುಖಿ ಕಾರ್ಯಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡರು. 2018ರ ಅಕ್ಟೋಬರ್ 20ರಂದು ಅವರು ಲಿಂಗೈಕ್ಯರಾದರೂ, ಅವರು ಬಿತ್ತಿದ ಮಾನವೀಯತೆಯ ಬೀಜಗಳು ಇಂದಿಗೂ ಸಮಾಜದಲ್ಲಿ ಚಿಗುರುತ್ತಿವೆ. ಶ್ರೀಗಳ ಜೀವನದ ಮೂಲ ಆಶಯ ಬಸವಣ್ಣನವರ ಕಾಯಕ, ದಾಸೋಹ, ಸಮಾನತೆ ಮತ್ತು ಮಾನವೀಯತೆಯ ತತ್ವಗಳಾಗಿದ್ದವು. ಧರ್ಮವೆಂದರೆ ಕೇವಲ ಆಚರಣೆಗಳಲ್ಲ, ಮನುಷ್ಯನ ನೋವಿಗೆ ಸ್ಪಂದಿಸುವುದು; ಪೂಜೆ ಎಂದರೆ ಕೇವಲ ವಿಧಿವಿಧಾನಗಳಲ್ಲ, ಶೋಷಿತರಿಗೆ ನೆರವಾಗುವುದು ಎಂಬ ಉದಾತ್ತ ಚಿಂತನೆಯನ್ನು ಅವರು ತಮ್ಮ ಬದುಕಿನ ಮೂಲಕ ತೋರಿಸಿಕೊಟ್ಟರು. ಜಾತಿ, ಧರ್ಮ, ಭಾಷೆ ಮತ್ತು ವರ್ಗಗಳ ಹೆಸರಿನಲ್ಲಿ ಮನುಷ್ಯರನ್ನು ವಿಭಜಿಸುವ ಮನೋಭಾವವನ್ನು ವಿರೋಧಿಸಿ, ಎಲ್ಲರೂ ಸಮಾನ ಗೌರವದಿಂದ ಬದುಕುವ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿದರು. ಶಿಕ್ಷಣವು ಸಾಮಾಜಿಕ ಪರಿವರ್ತನೆಯ ಶಕ್ತಿಶಾಲಿ ಸಾಧನವೆಂದು ನಂಬಿದ್ದ ಶ್ರೀಗಳು ಗದಗ, ಹಾವೇರಿ ಸೇರಿದಂತೆ ಉತ್ತರ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಿದರು. ಪೂರ್ವಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ವಿವಿಧ ಶೈಕ್ಷಣಿಕ ಅವಕಾಶಗಳು ಲಭ್ಯವಾಗುವಂತೆ ಶ್ರಮಿಸಿದರು. ಬಡ ಮತ್ತು ಗ್ರಾಮೀಣ ಮಕ್ಕಳಿಗೆ ಶಿಕ್ಷಣ ದೊರೆಯಬೇಕು, ಆರ್ಥಿಕ ಅಸಮಾನತೆಯಿಂದ ಯಾರೂ ವಿದ್ಯೆಯಿಂದ ವಂಚಿತರಾಗಬಾರದು ಎಂಬುದು ಅವರ ಆಶಯವಾಗಿತ್ತು. ಅನ್ನದಾಸೋಹ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ನೀಡಿದ ಪ್ರೋತ್ಸಾಹವು ಅವರ ಜನಪರ ಕಾಳಜಿಗೆ ಸಾಕ್ಷಿಯಾಗಿದೆ. ಸಮಾಜದಲ್ಲಿ ಬೇರೂರಿದ್ದ ಜಾತೀಯತೆ, ಅಸ್ಪೃಶ್ಯತೆ, ಮೇಲು–ಕೀಳು ಮತ್ತು ಲಿಂಗಭೇದಗಳ ವಿರುದ್ಧ ಶ್ರೀಗಳು ನಿರಂತರವಾಗಿ ಧ್ವನಿ ಎತ್ತಿದರು. ದಲಿತ ಕೇರಿಗಳು ಹಾಗೂ ತಾಂಡಾಗಳ ಅಭಿವೃದ್ಧಿಗೆ ಕೈಜೋಡಿಸಿ, ಹಿಂದುಳಿದ ಸಮುದಾಯಗಳ ಬದುಕಿನಲ್ಲಿ ಬದಲಾವಣೆ ತರಲು ಪ್ರಯತ್ನಿಸಿದರು. ಮನುಷ್ಯನನ್ನು ಮನುಷ್ಯನೇ ಹೊತ್ತುಕೊಂಡು ನಡೆಯುವ ವ್ಯವಸ್ಥೆ ಮಾನವೀಯತೆಗೆ ವಿರುದ್ಧವೆಂಬ ಅವರ ಚಿಂತನೆ ಸಮಾನತೆಯ ಸಮಾಜದ ಅಗತ್ಯವನ್ನು ಸಾರುತ್ತದೆ. ದೀನದಲಿತರ ಸೇವೆಯಲ್ಲಿಯೇ ನಿಜವಾದ ಧಾರ್ಮಿಕತೆಯಿದೆ ಎಂಬ ಸಂದೇಶವನ್ನು ಅವರು ತಮ್ಮ ಕಾರ್ಯಗಳ ಮೂಲಕ ಜನರಿಗೆ ತಲುಪಿಸಿದರು.

### ಕೋಮು ಸೌಹಾರ್ದತೆ

ಶ್ರೀಗಳ ವ್ಯಕ್ತಿತ್ವದ ಮತ್ತೊಂದು ಮಹತ್ವದ ಆಯಾಮವಾಗಿತ್ತು. ಮಠ, ಮಂದಿರ, ಮಸೀದಿಗಳ ನಿರ್ಮಾಣಕ್ಕೆ ನೆರವಾಗುವ ಮೂಲಕ ಧರ್ಮಗಳ ನಡುವಿನ ಪರಸ್ಪರ ಗೌರವವನ್ನು ಬೆಳೆಸಲು ಶ್ರಮಿಸಿದರು. ಧರ್ಮವು ಮನುಷ್ಯರನ್ನು ಒಗ್ಗೂಡಿಸಬೇಕೇ ಹೊರತು ಪರಸ್ಪರ ದೂರಮಾಡಬಾರದು ಎಂಬ ಆಶಯವನ್ನು ಪ್ರತಿಪಾದಿಸಿದರು. ಅವರ ಸಾಮಾಜಿಕ ಸೇವೆ ಮತ್ತು ಕೋಮು ಸೌಹಾರ್ದತೆಯ ಕಾರ್ಯಗಳನ್ನು ಗುರುತಿಸಿ ರಾಷ್ಟ್ರೀಯ ಮಟ್ಟದಲ್ಲಿ ಗೌರವಿಸಲಾಯಿತು. ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ–ಪುರಸ್ಕಾರಗಳು ಅವರ ಸೇವೆಯನ್ನು ಗುರುತಿಸಿವೆ. ಶ್ರೀಗಳ ಹೋರಾಟದ ಮನೋಭಾವವು ರೈತರ ಸಮಸ್ಯೆಗಳು, ಕನ್ನಡ ನಾಡು–ನುಡಿ, ಪ್ರಾದೇಶಿಕ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯಲ್ಲಿಯೂ ಸ್ಪಷ್ಟವಾಗಿ ಕಾಣಿಸಿತು. ಮಹಾದಾಯಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ ರೈತರ ಹೋರಾಟಕ್ಕೆ ಬೆಂಬಲ ನೀಡಿದ ಅವರು, ರೈತರ ಬದುಕು ಹಸನಾಗಬೇಕು ಮತ್ತು ಕೃಷಿಗೆ ಅಗತ್ಯವಾದ ನೀರು ದೊರೆಯಬೇಕು ಎಂಬ ಕಾಳಜಿಯನ್ನು ವ್ಯಕ್ತಪಡಿಸಿದರು. ನಂಜುಂಡಪ್ಪ ವರದಿಯ ಅನುಷ್ಠಾನ, ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಮಾನ್ಯತೆ ಮತ್ತು ಗಡಿ ಸಮಸ್ಯೆಗಳ ಪರಿಹಾರದಂತಹ ವಿಷಯಗಳಲ್ಲಿಯೂ ತಮ್ಮ ನಿಲುವನ್ನು ವ್ಯಕ್ತಪಡಿಸಿದರು. ಪರಿಸರ ಸಂರಕ್ಷಣೆಯ ವಿಚಾರದಲ್ಲಿ ಕಪ್ಪತಗುಡ್ಡದ ರಕ್ಷಣೆಗೆ ಅವರು ನಡೆಸಿದ ಹೋರಾಟ ವಿಶೇಷವಾಗಿ ಸ್ಮರಣೀಯ. ಗಣಿಗಾರಿಕೆಯಿಂದ ಪ್ರಕೃತಿಗೆ ಉಂಟಾಗುವ ಅಪಾಯಗಳ ಕುರಿತು ಜನಜಾಗೃತಿ ಮೂಡಿಸಿ, ಕಪ್ಪತಗುಡ್ಡವನ್ನು ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಿಸಬೇಕೆಂಬ ಬೇಡಿಕೆಗೆ ಬೆಂಬಲವಾಗಿ ಧರಣಿ ಮತ್ತು ಉಪವಾಸ ಸತ್ಯಾಗ್ರಹಗಳಲ್ಲಿ ಪಾಲ್ಗೊಂಡರು. ಪ್ರಕೃತಿ ನಾಶವಾದರೆ ಮಾನವ ಬದುಕಿನ ಅಸ್ತಿತ್ವವೇ ಅಪಾಯಕ್ಕೆ ಸಿಲುಕುತ್ತದೆ ಎಂಬ ಸತ್ಯವನ್ನು ತಮ್ಮ ಹೋರಾಟದ ಮೂಲಕ ಸಮಾಜಕ್ಕೆ ಮನವರಿಕೆ ಮಾಡಿಕೊಟ್ಟರು. ಪರಿಸರ ರಕ್ಷಣೆ ಎಂದರೆ ಕೇವಲ ಮರಗಳನ್ನು ಉಳಿಸುವುದಲ್ಲ; ಮುಂದಿನ ಪೀಳಿಗೆಯ ಬದುಕನ್ನು ಸುರಕ್ಷಿತಗೊಳಿಸುವುದಾಗಿದೆ ಎಂಬ ಸಂದೇಶ ಅವರ ಕಾರ್ಯಗಳಲ್ಲಿ ಅಡಕವಾಗಿದೆ. ಮಠದಲ್ಲಿ ಪ್ರತಿವಾರ ನಡೆಯುತ್ತಿದ್ದ ಶಿವಾನುಭವ ಕಾರ್ಯಕ್ರಮಗಳು ಶ್ರೀಗಳ ವೈಚಾರಿಕ ಪ್ರಜ್ಞೆಗೆ ಸಾಕ್ಷಿಯಾಗಿದ್ದವು. ಧರ್ಮ ಮತ್ತು ಆಧ್ಯಾತ್ಮಿಕತೆಯ ಜೊತೆಗೆ ಸಾಹಿತ್ಯ, ಕೃಷಿ, ಗ್ರಾಮೀಣ ಬದುಕು, ಸಾಮಾಜಿಕ ಸಮಸ್ಯೆಗಳು ಹಾಗೂ ಮಾನವೀಯ ಮೌಲ್ಯಗಳ ಕುರಿತು ಚರ್ಚೆಗಳಿಗೆ ಅವರು ಅವಕಾಶ ಕಲ್ಪಿಸಿದರು. ಪುಸ್ತಕಗಳ ಮೇಲಿನ ಅಪಾರ ಪ್ರೀತಿಯಿಂದ ಅವರು ಪುಸ್ತಕಪ್ರಿಯ ಸ್ವಾಮೀಜಿ ಎಂದೂ ಗುರುತಿಸಿಕೊಂಡಿದ್ದರು. ನಾಗರ ಪಂಚಮಿಯಂದು ಹುತ್ತಕ್ಕೆ ಹಾಲೆರೆಯುವ ಬದಲು ಬಡಮಕ್ಕಳಿಗೆ ಹಾಲುಣಿಸುವಂತಹ ವೈಚಾರಿಕ ಸಂದೇಶಗಳ ಮೂಲಕ ಮೂಢನಂಬಿಕೆಗಳ ಬದಲಿಗೆ ಮಾನವೀಯ ಕಾಳಜಿಗೆ ಆದ್ಯತೆ ನೀಡಬೇಕೆಂದು ಸಾರಿದರು. ತೋಂಟದಾರ್ಯ ಜಾತ್ರೆಗೆ ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸ್ಪರ್ಶ ನೀಡುವ ಮೂಲಕ ಧಾರ್ಮಿಕ ಆಚರಣೆಗಳನ್ನು ಸಾಮಾಜಿಕ ಜಾಗೃತಿಯ ವೇದಿಕೆಯನ್ನಾಗಿ ರೂಪಿಸಿದರು.

ಪೂಜ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಬದುಕು ನಮಗೆ ಅನೇಕ ಪಾಠಗಳನ್ನು ಕಲಿಸುತ್ತದೆ. ಅಧಿಕಾರಕ್ಕಿಂತ ಸೇವೆ ದೊಡ್ಡದು, ಆಚರಣೆಗಿಂತ ಮಾನವೀಯತೆ ಶ್ರೇಷ್ಠ, ಜಾತಿಗಿಂತ ಮನುಷ್ಯತ್ವ ಮುಖ್ಯ ಮತ್ತು ಅಭಿವೃದ್ಧಿಗಿಂತ ಪ್ರಕೃತಿಯ ಸಮತೋಲನವನ್ನು ಕಡೆಗಣಿಸಬಾರದು ಎಂಬ ಸಂದೇಶಗಳು ಅವರ ಜೀವನದ ಸಾರವಾಗಿವೆ. ಸಮಾಜದಲ್ಲಿ ಅಸಮಾನತೆ, ಧಾರ್ಮಿಕ ದ್ವೇಷ, ಪರಿಸರ ನಾಶ ಮತ್ತು ಬಡತನ ಇರುವವರೆಗೆ ಅವರ ವಿಚಾರಗಳ ಪ್ರಸ್ತುತತೆ ಕಡಿಮೆಯಾಗುವುದಿಲ್ಲ. ಶ್ರೀಗಳು ಇಂದು ನಮ್ಮೊಂದಿಗಿಲ್ಲದಿದ್ದರೂ ಅವರ ಸೇವಾ ಮನೋಭಾವ, ಬಸವತತ್ವದ ಬದ್ಧತೆ ಮತ್ತು ಹೋರಾಟದ ಆದರ್ಶಗಳು ನಮ್ಮೆಲ್ಲರಿಗೂ ದಾರಿದೀಪವಾಗಿವೆ. ಅವರ ಪುಣ್ಯಸ್ಮರಣೆಯು ಕೇವಲ ಭಾವನಾತ್ಮಕ ನಮನಕ್ಕೆ ಸೀಮಿತವಾಗದೆ, ಸಮಾನತೆ, ಸೌಹಾರ್ದತೆ, ಶಿಕ್ಷಣ, ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಕಾರ್ಯಪ್ರವೃತ್ತರಾಗುವ ಸಂಕಲ್ಪದ ದಿನವಾಗಲಿ.

ಕಾಯಕದಲ್ಲಿ ನಿಷ್ಠೆ, ಚಿಂತನೆಯಲ್ಲಿ ವೈಚಾರಿಕತೆ, ಬದುಕಿನಲ್ಲಿ ಮಾನವೀಯತೆ ಮತ್ತು ಸಮಾಜದಲ್ಲಿ ಸೌಹಾರ್ದತೆ ? ಇವೇ ಪೂಜ್ಯ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳಿಗೆ ನಾವು ಸಲ್ಲಿಸಬಹುದಾದ ನಿಜವಾದ ಗೌರವ.



**ಸಂಗಮೇಶ ಎನ್. ಜವಾದಿ,**
**ಬರಹಗಾರರು, ಪರಿಸರವಾದಿ, ಬೀದರ ಜಿಲ್ಲೆ.**

# ಶಂಖ : ಧಾರ್ಮಿಕ ಪಾವಿತ್ರ್ಯ, ಆಧ್ಯಾತ್ಮಿಕ ಶಕ್ತಿ ಮತ್ತು ಪರಂಪರೆಯ ಮಹತ್ವ

ಶಂಖ ಪ್ರಾಚೀನ ಕಾಲದಿಂದಲೂ ಹಿಂದೂಗಳಿಗೆ ಅತ್ಯಂತ ಪೂಜನೀಯ ವಸ್ತು ಶಂಖ.
ತಂತಿವಾದ್ಯ, ಶಂಖ, ನಾದಸ್ವರ, ಕೊಂಬು ಹಾಗೂ ತಾಳ ಇವುಗಳಿಂದ ಹೊರಡುವ ಶಬ್ಧಗಳನ್ನು ಪಂಚಮಹಾಶಬ್ಧಗಳೆನ್ನುತ್ತಾರೆ. ಹಿಂದೂ ಪುರಾಣಗಳ ಪ್ರಕಾರ ಹದಿನೆಂಟುವಾದ್ಯಗಳಲ್ಲಿ ಶಂಖವಾದ್ಯವೂ ಒಂದು .



ವೈಜ್ಞಾನಿಕ ದೃಷ್ಟಿಯಿಂದ ನೋಡಿದರೆ ಶಂಖ ವಿಜ್ಞಾನಿಗಳ ಗಮನವನ್ನು ಬಹಳವಾಗಿ ಸೆಳೆದಿದೆ. ಶಂಖವನ್ನು ಊದುವಾಗ ಅದೊರೊಳಗೆ ಪ್ರವೇಶಿಸುವ ಉಸಿರು ಶಂಖದೊಳಗಿನ ವಕ್ರದಾರಿಯನ್ನು ದಾಟಿ ಹೊರಬರುವಾಗ ತೀವ್ರವೇಗವುಳ್ಳದ್ದೂ ಹೆಚ್ಚು ಉಷ್ಣತೆಯುಳ್ಳದ್ದೂ ಆಗುವದೆಂದು ಪ್ರಯೋಗಗಳಿಂದ ಸಿದ್ಧವಾಗಿದೆ ಹೀಗೆ ಶಂಖದಿಂದ ಹೊರಬರುವ ಗಾಳಿಯ ಉಷ್ಣಾಂಶವು ನೂರಕ್ಕೆ ಎಂಟರಷ್ಟಿದ್ದರೆ ಅದರ ಪ್ರಭಾವದಿಂದ ಹೊರಗಿನ ಗಾಳಿಯು ಒಂದು ಸೆಕೆಂಡಿಗೆ 8708ಅಡಿ ವೇಗದಿಂದ ಚಲಿಸುವುದೆಂದು ಪ್ರಯೋಗ ಫಲಿತಾಂಶಗಳು ತಿಳಿಸುತ್ತವೆ. ತತ್ಪರಿಣಾಮವಾಗಿ ವಾತಾವರಣದಲ್ಲಿನ ರೋಗಜನಕ ಕೀಟಾಣಿಗಳು ನಾಶವಾಗುವುದಲ್ಲದೆ ವಾತಾವರಣದಲ್ಲಿನ ತೇಜಸ್ಸತ್ವದ ಪ್ರಮಾಣವೂ ಹೆಚ್ಚುವುದು. ಇಂತಹ ವಾತಾವರಣದಲ್ಲಿನ ವಾಯುವನ್ನು ಉಸಿರಾಡುವುದರಿಂದ ದೇಹದಲ್ಲಿ ರೋಗನಿರೋಧಕ ಶಕ್ತಿಯೂ ಬೆಳೆಯುವುದು ಎಂದು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಧನ್ವಂತರೀ ನಿಘಂಟಿನಲ್ಲೂ ಶಂಖದ ಗುಣವರ್ಣನೆ ಹೀಗಿದೆ. ಶಂಖ
ನಾದು ಕಟು ವಾಕೇ
ವಿಯೋಷ್ಣ ವ್ರಕೀರ್ತಿತ ಪರಿಣಾಮ ಜಯೇತ್
ಶೂಲಂ ಚಕ್ಷುಷಂ ರಕ್ತಪಿತ್ತಜಿತ
ಶಂಖವು ರುಚಿಗೆ ಕಾರವೆನಿಸಿದರೂ ಜೀರ್ಣವಾದ ಮೇಲೆ ಮಧುರವಾಗಿರುವುದು ಅದು ಸಮುದ್ರದಲ್ಲಿ ಹುಟ್ಟಿದರೂ ಜೀರ್ಣಾಗ್ನಿಯನ್ನು ಪ್ರಜ್ವಲಿಸುವುದರಿಂದ ವಿಷ್ಣುವೀರ್ಯವೆಂದು ಹೇಳುತ್ತಾರೆ ಅದು ಹೊಟ್ಟೆ ನೋವು ಕಣ್ಣಿನ ರೋಗ ಹಾಗೂ ರಕ್ತಸ್ರಾವದ ಬೇನೆಯನ್ನು ಗುಣಪಡಿಸುತ್ತದೆ. ಶಂಖವನ್ನು ನೀರು ಜೇನುತುಪ್ಪ, ನಿಂಬೇರಸದಲ್ಲಿ ತೇಯ್ದು ತಿಂದರೆ ಅಮ್ಲಪಿತ್ತ ತಲೆತಿರುಗುವಿಕೆ ಮೊಡವೆ ಕುರು ಮುಂತಾದ ದೋಷಗಳ ನಿವಾರಣೆಯಾಗುವುದೆಂದು ಆಯುರ್ವೇದ ಶಾಸ್ತ್ರ ಹೇಳುತ್ತದೆ.

ವೇಗ ಮಾತುಬಾರದ ಮಕ್ಕಳಿಗೆ ಶಂಖದಲ್ಲಿಟ್ಟ ನೀರನ್ನು ಕುಡಿಸುವುದುಂಟು, ಸ್ವರಮಂತ್ರ ದೋಷದಿಂದುಂಟಾದ ಮೂಕತನಕ್ಕೆ ರೋಗಿಯು ದಿನಾಲೂ ಕೆಲವು ಸಮಯದವರೆವಿಗೆ ಶಂಖವನ್ನು ಊದಬೇಕು. ಇದರಿಂದ ಕಿವಿಡುತನವನ್ನು ಸಹ ನಿವಾರಿಸಬಹುದು ಉತ್ತರ ಪ್ರದೇಶದ ಕೆಲವೆಡೆಗಳಲ್ಲಿ ಮಾತು ಸರಿಯಾಗಿ ಬಾರದ ಮಕ್ಕಳಿಗೆ ಚಿಕ್ಕ ಶಂಖದ ಮಾಲೆಯನ್ನು ತೊಡಿಸುತ್ತಾರೆ. ವಿಜ್ಞಾನಿಗಳನ್ನೂ ಅಚ್ಚರಿಗೊಳಿಸಿದ ಗುಣಧರ್ಮಗಳು ಶಂಖದಲ್ಲಿವೆ. ಶಂಖದಲ್ಲಿ ತುಂಬಿಹೊರಬಂದ ಗಾಳಿ ನೂರಾರುಪಟ್ಟು ವೇಗದ ವೃದ್ಧಿಯನ್ನು ಪಡೆಯುತ್ತದೆ. ಈ ಗಾಳಿಯಲ್ಲಿ ತುಂಬಿದ ಶಂಖಧಾನ ವಾತಾವರಣವನ್ನು ಸ್ವಚ್ಛವಾಗಿಸುತ್ತದೆ. ಮನಸ್ಸಿನ ತುಮುಲಗಳನ್ನು ತೊಡೆಯುತ್ತದೆ. ಸಕಾರಾತ್ಮಕ ಚಿಂತನೆಗಳಿಗೆ ಸಹಕಾರಿಯಾಗುತ್ತದೆ. ಶಂಖದಲ್ಲಿ ತುಂಬಿದ ನೀರು ಔಷಧವಾಗುತ್ತದೆ. ಅದನ್ನು ಸಿಂಪಡಿಸುವುದರಿಂದ ಕ್ಷುದ್ರಕೀಟಗಳು ನಾಶವಾಗುತ್ತವೆ. ಮಾತು ಬರದಿರುವ ಮಕ್ಕಳಿಗೆ ರಾತ್ರಿ ಶಂಖದಲ್ಲಿ ತುಂಬಿದ ಶಂಬೋದಕವನ್ನು ಬೆಳಗ್ಗೆ ಕುಡಿಸುವುದರಿಂದ ಮಾತು ಬರುತ್ತದೆ. ಶಂಖವನ್ನು ಕಿವಿಗಿಟ್ಟುಕೊಂಡರೆ ಅದರಿಂದ ಮೃದು ಮಧುರವಾದ ಮಂದ್ರಧ್ವನಿ ಕೇಳಿಸುತ್ತದೆ. ದೇವರೆದುರು ಪೂಜಿತ ಶಂಖದಿಂದ ಹೊರಬರುವ ಈ ಧ್ವನಿ ಅಥಟುಥಿ ಇಟಿಜಡಿರಥಿಯನ್ನು ಉಂಟುಮಾಡುತ್ತದೆ. ಈ ಶಕ್ತಿಯಿಂದ ಮನಸ್ಸು ದೊಡ್ಡದರ ಬಗ್ಗೆ ಯೋಚಿಸುವ ಶಕ್ತಿ ಪಡೆಯುತ್ತದೆ. ಸೂಕ್ಷ್ಮವಾದ ಈ ರೀತಿಯ ಸಕಾರಾತ್ಮಕ ಪರಿಣಾಮ ಶಂಖದಿಂದ ಲಭ್ಯವಾಗಬೇಕಿದ್ದರೆ ಶಂಖವನ್ನು ಸ್ವಚ್ಛವಾಗಿಡಬೇಕು. ಶಂಖವು ಭಿನ್ನವಾಗಿರಕೂಡದು. ಶಂಖವು ಸ್ವತಃ ಶುದ್ಧ: ಶಂಖದ ಮಧ್ಯದಲ್ಲಿ ವರುಣ, ಅಗ್ರದಲ್ಲಿ ಗಂಗಾ,ಸರಸ್ವತಿಯರು, ಬೆನ್ನಿನಲ್ಲಿ ಪ್ರಜಾಪತಿ, ಸಮಗ್ರದಲ್ಲಿ ಚಂದ್ರ ಸೂರ್ಯರು ನೆಲೆಸಿದ್ದಾರೆ. ವಾಸುದೇವನ ಆಜ್ಞೆಯಂತೆ ತ್ರೈಲೋಕ್ಯದ ಸರ್ವತೀರ್ಥಗಳೂ ಶಂಖದಲ್ಲಿ ನಿಂತಿವೆ. ಇಂತಹ ಪರಮ ಪಾವನವಾದ ಶಂಖವನ್ನು ಪೂಜಿಸುವುದರಿಂದ ಲಕ್ಷ್ಮೀಪ್ರಾಪ್ತಿಯ, ಫಲ.

**ಶಂಖದ ಸ್ವಚ್ಛತೆ:**

ಸ್ವತಃ ಶುದ್ಧವಾದ ಶಂಖವನ್ನು ಸ್ವಚ್ಛವಾಗಿರಿಸಿಕೊಂಡಿರಬೇಕು. ಶಂಖದ ಗರ್ಭದಲ್ಲಿ ತುಳಸೀ ಪುಷ್ಪಗಳು ಕೊಳೆತು ಅಂಟಿ ಜಿರಲೆಗಳ ವಾಸಸ್ಥಾನವಾಗುವಷ್ಟು ಅವ್ಯವಸ್ಥೆ ಇರಬಾರದು. ಶಲಲಿಯಿಂದ (ವರಾಹಮುಳ್ಳು/ರೋಮಗಳಿಂದ) ಶಂಖವನ್ನು ಶುದ್ಧವಾಗಿಸಬೇಕು. ಪ್ರತೀದಿನ ನೀರಿನಿಂದ ಒಳಹೊರಗೆ ತೊಳೆದು ಶುದ್ಧವಾಗಿಸಬೇಕು. ವರ್ಷಕ್ಕೊಮ್ಮೆ ಉದ್ವರ್ತನೆ ಮೊದಲಾದ ವಾರ್ಷಿಕ ವಿಶೇಷ ಪೂಜೆಯ ಸಮಯದಲ್ಲಿ ಭತ್ತದ ಹೊಟ್ಟಿನಲ್ಲಿ ಉಜ್ಜಿ ಫಳಫಳಿಸುವಂತೆ ಮಾಡಬೇಕು. ಕ್ರಿಯಾಸಾರ ಹೇಳುವಂತೆ 'ಶಂಖಶುದ್ಧಿರ್ಜಲೇನೈವ ತುಷಾಭಿರ್ಘಷ್ರಣೇನ ಚ' ನೀರು ಮತ್ತು ತುಷಾಘರ್ಷಣದಿಂದ ಶಂಖವನ್ನು ಸ್ವಚ್ಛಗೊಳಿಸಬೇಕು. ತುಷಾ ಎಂದರೆ ಹೊಟ್ಟು. ಹೊಟ್ಟಿನ ರಾಶಿಯಲ್ಲಿ ಶಂಖವನ್ನು ಇಟ್ಟು ವೇಗವಾಗಿ ಚದುರಿಸುತ್ತಾ ತಿಕ್ಕುವುದರಿಂದ ಶಂಖವು ನಳನಳಿಸುತ್ತದೆ. ಹಿತ್ತಾಳೆ–ತಾಮ್ರದ ಪಾತ್ರೆಗಳನ್ನು ಹೀಗೆಯೇ ಹೊಟ್ಟಿನಲ್ಲಿ ತಿಕ್ಕುವ ಸಂಪ್ರದಾಯ ಹಳ್ಳಿಗಳಲ್ಲಿದೆ. ಅದರಿಂದ ಪಾತ್ರೆ ಹರಿವಾಣಗಳಲ್ಲಿ ಉತ್ತಮ ಹೊಳಪು (ಶೈನಿಂಗ್) ಉಂಟಾಗುತ್ತದೆ.

**ಶಂಖವು ಭಿನ್ನವಾಗಿರಕೂಡದು**

ಒಡೆದ ಶಂಖವನ್ನು ಪೂಜೆ, ಅಭಿಷೇಕ, ಧ್ಯಾನ (ಊದುವಿಕೆ) ಗಳಿಗಾಗಿ ಬಳಸಕೂಡದು.ಶಂಖದ ವಾಸ್ತು ಸರಿಯಿಲ್ಲದಿದ್ದಾಗ ಜಾಸ್ತಿ ಬೆಳೆದ ಭಾಗಗಳನ್ನು ಲೋಹದಿಂದ ಕೆರೆದು ಕೆತ್ತಿ ಸರಿಪಡಿಸುವುದಕ್ಕೆ ಅವಕಾಶವಿದೆ. ಶಂಖದ ಆವರ್ತ (ಒಳಸುಳಿ) ದೊಡ್ಡದಿದ್ದು ಸರಿಯಾಗಿ ನೀರು ಹಿಡಿಸದಾದಾಗ ಅದನ್ನೂ ಕೆತ್ತಿ ತೆಗೆಯಬಹುದು. ಆದರೆ ಈ ಆವರ್ತಭಂಗವೆಂಬುದು ಶಂಖದಲ್ಲಿ ದೋಷ. ಬಂಗಾರದ (ಬೆಳ್ಳಿಯ) ಕಟ್ಟು ಹಾಕಿದಾಗ ಆವರ್ತಭಂಗದೋಷ ಇರುವುದಿಲ್ಲ. ಸ್ಕಂದಪುರಾಣದಲ್ಲಿ ಈ ಮಾತಿದೆ.
ವೃತ್ತತ್ವಂ ಸ್ನಿಗ್ಧತಾಚ್ಚತ್ವಂ ಶಂಖತಿ ಗುಣತ್ರಯಮ್। ಆವರ್ತಭಂಗದೋಷೋ ಹಿ ಹೇಮಯೋಗಾದ್ವಿನಶ್ಯತಿ

**ನಯವಾಗಿರುವಿಕೆ, ಬಿಳಿ**

ಮಧ್ಯಭಾಗ ಉರುಟಾಗಿರುವುದು, ಬಣ್ಣವೆಂಬುದು ಮೂರು ಶಂಖದ ಶ್ರೇಷ್ಠತೆಗೆ ಬೇಕಾದ ಗುಣಗಳು, ಸುಳಿಯನ್ನು ಕೆತ್ತಿದ ದೋಷ ಶಂಖದಲ್ಲಿದ್ದಲ್ಲಿ ಬಂಗಾರದ ಸಂಬಂಧದಿಂದ ಪರಿಹಾರವಾಗುತ್ತದೆ. ಅಭಿಷೇಕಕ್ಕೆ ಮಾತ್ರ ಶಂಖವಲ್ಲ. ಅರ್ಘ್ಯಕ್ಕೂ ಅದು ಬೇಕು. ಪೂಜಾಂತ್ಯದಲ್ಲಿ ದೂರ್ವಾಂಕುರಸಮಾಯುಕ್ತವಾದ ಶುದ್ಧೋದಕವನ್ನು ತುಂಬಿ ನಾಸಾಗ್ರ ಪರ್ಯಂತ ಎತ್ತಿ ಅರ್ಘ್ಯವನ್ನಿತ್ತು ಪ್ರದಕ್ಷಿಣೆ ಬಂದು ನಮಸ್ಕರಿಸಿದರೆ ಭೂಪ್ರದಕ್ಷಿಣೆ ಬಂದ ಫಲವುಂಟು. ಹೀಗೆ, ಶಂಖ ಪುರಾಣಗಳ ಕಾಲದಿಂದ ಇಂದಿನ ಕಾಲದವರೆವಿಗೂ ಪ್ರಸಿದ್ದವೂ ಉಪಯುಕ್ತವೂ ಪೂಜನೀಯವೂ ಆಗಿರುವ ಕೆಲವೇ ವಸ್ತುಗಳಲ್ಲೊಂದಾಗಿದೆ.



ಪ್ರಶಾಂತಭಟ್
ಕೋಟೇಶ್ವರ

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

## ಏಷ್ಯನ್ ಪ್ಯಾರಾ ಗೇಮ್ಸ್ : ಶೀತಲ್ ದೇವಿ, ತೋಮನ್ ಕುಮಾರ್‌ಗೆ ಚಿನ್ನ




ನಗೋಯಾ: ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಭಾರತದ ಶೀತಲ್ ದೇವಿ ಮತ್ತು ತೋಮನ್ ಕುಮಾರ್ ಅವರು ಮಿಶ್ರ ತಂಡ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಇಂದು ನಡೆದ ಫೈನಲ್ ಪಂದ್ಯದಲ್ಲಿ ಅವರು ಇಂಡೋನೇಷ್ಯಾದ ಟಿಯೋಡೋರಾ ಆಡಿ ಅಯುಡಿಯಾ ಫೆರೆಲ್ಲಿ ಮತ್ತು ಕೆನ್ ಸ್ವಾಗುಮಿಲಾಂಗ್ ಅವರನ್ನು 151-148 ಅಂತರದಿಂದ ಸೋಲಿಸಿದರು. ಅರ್ಹತಾ ಸುತ್ತಿನಲ್ಲಿ ಹೊಸ ವಿಶ್ವ ದಾಖಲೆ ನಿರ್ಮಿಸಿದ್ದ ಅಗ್ರ ಶ್ರೇಯಾಂಕದ ಭಾರತೀಯ ಜೋಡಿಯು, ಪಂದ್ಯದುದ್ದಕ್ಕೂ ನಿಖರವಾಗಿ ಗುರಿ ಸಾಧಿಸುವ ಮೂಲಕ ಮುನ್ನಡೆಯನ್ನು ಕಾಯ್ದುಕೊಂಡಿತು.

ಮೊದಲ ಸುತ್ತಿನಲ್ಲಿ (ಎಂಡ್) ಭಾರತ 38-37 ಅಂತರದಿಂದ ಮುನ್ನಡೆ ಸಾಧಿಸಿತು. ಎರಡನೇ ಸುತ್ತಿನಲ್ಲಿ ಕೇವಲ ಒಂದು ಅಂಕವನ್ನು ಮಾತ್ರ ಕಳೆದುಕೊಂಡ ಭಾರತ, ತನ್ನ ಮುನ್ನಡೆಯನ್ನು 77-73 ಅಂಕಗಳಿಗೆ (ನಾಲ್ಕು ಅಂಕಗಳ ಅಂತರಕ್ಕೆ) ವಿಸ್ತರಿಸಿತು. ಮೂರನೇ ಸುತ್ತಿನಲ್ಲಿ ಇಂಡೋನೇಷ್ಯಾ ತಂಡವು ಒಂದು ಅಂಕದ ಅಂತರದಿಂದ ಜಯಗಳಿಸಿದರೂ, ಭಾರತವು ಮೂರು ಅಂಕಗಳ ಮುನ್ನಡೆಯನ್ನು ಉಳಿಸಿಕೊಂಡಿತು. ಅಂತಿಮ ಸುತ್ತಿನಲ್ಲಿ ಎರಡೂ ತಂಡಗಳು ತಲಾ 38 ಅಂಕಗಳನ್ನು ಗಳಿಸಿದವು. ಇದರೊಂದಿಗೆ ಭಾರತವು ಮೂರು ಅಂಕಗಳ ಅಂತರದಿಂದ ಗೆದ್ದು, ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿತು. ಕಾಂಪೌಂಡ್ ಮಿಶ್ರ ತಂಡ ವಿಭಾಗದ ಅರ್ಹತಾ ಸುತ್ತಿನಲ್ಲಿ ಶೀತಲ್ ಮತ್ತು ತೋಮನ್ ಒಟ್ಟು 1,402 ಅಂಕಗಳನ್ನು ಗಳಿಸುವ ಮೂಲಕ ಹಿಂದಿನ ವಿಶ್ವ ದಾಖಲೆಯನ್ನು ಎರಡು ಅಂಕಗಳಿಂದ ಹಿಂದಿಕ್ಕಿದ್ದರು. ಈ ಚಿನ್ನದ ಪದಕದೊಂದಿಗೆ ಅವರ ಅದ್ಭುತ ಪ್ರದರ್ಶನಕ್ಕೆ ಯಶಸ್ವಿ ಮುಕ್ತಾಯ ಸಿಕ್ಕಂತಾಯಿತು. ಹುಟ್ಟಿನಿಂದಲೇ ಕೈಗಳಿಲ್ಲದ ಶೀತಲ್, ಕಾಂಪೌಂಡ್ ಬಿಲ್ಲನ್ನು ಹಿಡಿದಿಡಲು ತಮ್ಮ ಪಾದಗಳು ಮತ್ತು ಕಾಲುಗಳನ್ನು ಬಳಸುತ್ತಾರೆ. ಬಾಣದ ದಾರವನ್ನು ಎಳೆಯಲು ಮತ್ತು ಬಿಡಲು ಅವರು ತಮ್ಮ ಭುಜ ಹಾಗೂ ದವಡೆಯನ್ನು ಬಳಸುತ್ತಾರೆ.

## ರಾತ್ರಿ ಅಳುತ್ತಿದ್ದ ಮಗುವಿನ ಕತ್ತು ಹಿಸುಕಿ ಕೊಂದಿದ್ದ ತಾಯಿ 3 ವರ್ಷಗಳ ಬಳಿಕ ಅರೆಸ್ಟ್



ಪತ್ತನಂತಿಟ್ಟ: ರಾತ್ರಿ ಅಳುತ್ತಿದ್ದ ಎಂಟು ತಿಂಗಳ ಹೆಣ್ಣು ಮಗುವನ್ನು ವ್ಯಕ್ತಿಯೊಬ್ಬ ಕತ್ತು ಹಿಸುಕಿ ಕೊಲೆ ಮಾಡಿ, ಮೃತದೇಹವನ್ನು ಕೆಸರುಗದ್ದೆಯಲ್ಲಿ ಎಸೆದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಮಾರು ಮೂರು ವರ್ಷಗಳ ಬಳಿಕ ಮಗುವಿನ ತಾಯಿಯನ್ನು ಬಂಧಿಸಲಾಗಿದೆ.

2023ರ ಆಗಸ್ಟ್‌ನಲ್ಲಿ ನಡೆದಿದ್ದ ಈ ಪ್ರಕರಣದಲ್ಲಿ ಬಂಧಿತ ಮಹಿಳೆಯನ್ನು ಮಂಜು (38) ಎಂದು ಗುರುತಿಸಲಾಗಿದೆ. ಈಕೆ ಪ್ರಕರಣದ ಮೂರನೇ ಆರೋಪಿಯಾಗಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ. ತಿರುವಲ್ಲಾದ ಉಪ ಪೊಲೀಸ್ ವರಿಷ್ಠಾಧಿಕಾರಿ ಪಿ.ಆರ್. ಸಂತೋಷ್ ನೇತೃತ್ವದ ವಿಶೇಷ ತನಿಖಾ ತಂಡವು ಸುದೀರ್ಘ ತನಿಖೆಯ ಬಳಿಕ ಮಂಜುವನ್ನು ಬಂಧಿಸಿದೆ. 2023ರ ಆಗಸ್ಟ್ 12ರಂದು ಪತ್ತನಂತಿಟ್ಟ ಜಿಲ್ಲೆಯ ಪುಳಿಕ್ಕೀಳ್ ಪೊಲೀಸ್ ಠಾಣೆ ವ್ಯಾಪ್ತಿಯ ವಲಂಜವಟ್ಟಂ ಪ್ರದೇಶದಲ್ಲಿ ಹುಲ್ಲು ಬೆಳೆದಿದ್ದ ಕೆಸರುಗದ್ದೆಯಲ್ಲಿ ಮಗುವಿನ ಮೃತದೇಹ ಪತ್ತೆಯಾಗಿತ್ತು. ಪೊಲೀಸರ ಪ್ರಕಾರ, 2023ರಲ್ಲಿ ಪತಿ ಎಸಕ್ಕಿ ಜೊತೆಗಿನ ಜಗಳದ ಬಳಿಕ ಮಂಜು ಪತಿಯನ್ನು ತೊರೆದು ತನ್ನ ಎಂಟು ತಿಂಗಳ ಮಗಳೊಂದಿಗೆ ಆಲಪ್ಪುಳಕ್ಕೆ ತೆರಳಿದ್ದಳು.ಅಲ್ಲಿನ ಕಲಾಕೋರ್ಡ್ ಪ್ರದೇಶದ ಅಂಗಡಿಯೊಂದರಲ್ಲಿ ಕುಳಿತಿದ್ದಾಗ, ಅಲೆಮಾರಿ ವ್ಯಕ್ತಿ ಎಂದು ಪೊಲೀಸರು ಗುರುತಿಸಿರುವ ಶಿವನ್ ಎಂಬಾತ ಮಂಜುವನ್ನು ಸಂಪರ್ಕಿಸಿದ್ದ. ತಾಯಿ ಮತ್ತು ಮಗುವಿನ ಆರೈಕೆ ಮಾಡುವುದಾಗಿ ಆತ ಭರವಸೆ ನೀಡಿದ್ದ ಎನ್ನಲಾಗಿದೆ. ನಂತರ ಮಂಜು ಮಗುವಿನೊಂದಿಗೆ ಶಿವನ್ ಜೊತೆ ಚಂಗನಾಶೇರಿಗೆ ತೆರಳಿದ್ದಳು. ಅಲ್ಲಿ ಅವರು ಅಂಗಡಿಯೊಂದರ ಜಗಲಿಯಲ್ಲಿ ಮಗುವಿನೊಂದಿಗೆ ವಾಸಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.ಒಂದು ರಾತ್ರಿ ಮಗು ನಿದ್ರೆಯಲ್ಲಿದ್ದಾಗ ಅಳಲು ಆರಂಭಿಸಿತ್ತು. ಇದರಿಂದ ಕೋಪಗೊಂಡ ಶಿವನ್ ಮಗುವಿನ ಕತ್ತನ್ನು ಬಲವಾಗಿ ಹಿಸುಕಿದ್ದಾನೆ. ಇದರಿಂದ ಮಗು ಮೃತಪಟ್ಟಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತದೇಹವನ್ನು ವಿಲೇವಾರಿ ಮಾಡುವ ಉದ್ದೇಶದಿಂದ ಶಿವನ್ ಮತ್ತು ಮಂಜು, ಶಿವನ್‌ನ ಕಿರಿಯ ಸಹೋದರ ಶಕ್ತಿಯನ್ನು ಸಂಪರ್ಕಿಸಿದ್ದಾರೆ ಎನ್ನಲಾಗಿದೆ.ನಂತರ ಶಕ್ತಿ ತಂದಿದ್ದ ಸ್ಕೂಟರ್‌ನಲ್ಲಿ ಮೂವರೂ ಮಗುವಿನ ಮೃತದೇಹವನ್ನು ಸಾಗಿಸಿ, ವಲಂಜವಟ್ಟಂನ ಕೆಸರುಗದ್ದೆಯಲ್ಲಿ ಎಸೆದು ಅಲ್ಲಿಂದ ತೆರಳಿದ್ದರು ಎಂದು ಪೊಲೀಸರು ಆರೋಪಿಸಿದ್ದಾರೆ. ಮಗುವಿಲ್ಲದೆ ಮಂಜು ಪಾಲಕ್ಕಾಡ್‌ನಲ್ಲಿರುವ ತನ್ನ ಕಾಲೊನಿಗೆ ಮರಳಿದಾಗ ಪ್ರಕರಣ ಬೆಳಕಿಗೆ ಬಂದಿದೆ.ಮಗು ಕಾಣೆಯಾಗಿರುವ ಕುರಿತು ಕಾಲೊನಿಯ ಸ್ಥಳೀಯ ಪ್ರವರ್ತಕಿ ಪ್ರಶ್ನಿಸಿದಾಗ, ಮಂಜು ಸಮರ್ಪಕ ಉತ್ತರ ನೀಡಲು ವಿಫಲಳಾಗಿದ್ದಳು ಎನ್ನಲಾಗಿದೆ. ಇದರಿಂದ ಅನುಮಾನಗೊಂಡ ಪ್ರವರ್ತಕಿ ಮೀಣಾಕ್ಷಿಪುರಂ ಪೊಲೀಸರಿಗೆ ಮಾಹಿತಿ ನೀಡಿದ್ದರು. ಮಂಜುವನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದಾಗ ಮಗುವಿನ ಕೊಲೆ ಪ್ರಕರಣದ ವಿವರಗಳು ಬಹಿರಂಗವಾಗಿವೆ. ವಿಚಾರಣೆ ವೇಳೆ ಮಂಜು ಅಪರಾಧವನ್ನು ಒಪ್ಪಿಕೊಂಡಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.ಬಳಿಕ ವಿಶೇಷ ಪೊಲೀಸ್ ತಂಡವು ಆಕೆಯನ್ನು ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆಗಾಗಿ ಪುಳಿಕ್ಕೀಳ್ ಪೊಲೀಸ್ ಠಾಣೆಗೆ ಕರೆದೊಯ್ದಿದೆ. ಪ್ರಕರಣದ ಮೊದಲ ಮತ್ತು ಎರಡನೇ ಆರೋಪಿಗಳಾದ ಶಿವನ್ ಹಾಗೂ ಶಕ್ತಿಗಾಗಿ ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದಾರೆ. ಪತ್ತನಂತಿಟ್ಟ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಆನಂದ್ ಅವರ ನಿರ್ದೇಶನದಲ್ಲಿ ಕಾರ್ಯಾಚರಣೆ ಮುಂದುವರಿದಿದೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ‘ಘರ್ ವಾಪಸಿ’ ಮೂಲಕ ಮುಂಬರುವ ವಿಧಾನಸಭಾ ಚುನಾವಣೆಗೆ ಬಿಜೆಪಿ ತಯಾರಿ



ಬೆಂಗಳೂರು: ಪ್ರತಿಪಕ್ಷ ಬಿಜೆಪಿಯಲ್ಲಿ ಮುಂದಿನ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ರಾಜಕೀಯ ಲೆಕ್ಕಾಚಾರಗಳು ಗರಿಗೆದರಿರುವ ಸೂಚನೆಗಳು ಕಾಣಿಸುತ್ತಿವೆ.ಪಕ್ಷದಿಂದ ದೂರ ಸರಿದಿರುವ, ಉಚ್ಚಾಟನೆಗೊಂಡಿರುವ ಅಥವಾ ಅಮಾನತುಗೊಂಡಿರುವ ಹಿರಿಯ ನಾಯಕರನ್ನು ಮತ್ತೆ ಮಾತೃಪಕ್ಷಕ್ಕೆ ಕರೆತರುವ ಮೂಲಕ ಸಂಘಟನೆಯನ್ನು ಬಲಪಡಿಸಬೇಕೆಂಬ ಚರ್ಚೆ ಪಕ್ಷದ ವಲಯದಲ್ಲಿ ಮಹತ್ವ ಪಡೆದುಕೊಳ್ಳುತ್ತಿದೆ.ಈ ಬೆಳವಣಿಗೆಗಳ ನಡುವೆ ಘರ್ ವಾಪಾಸಿ ಎಂಬ ರಾಜಕೀಯ ಪರಿಕಲ್ಪನೆ ಬಿಜೆಪಿಯೊಳಗೆ ಮತ್ತೆ ಮುನ್ನೆಲೆಗೆ ಬಂದಿದೆ.

ಮಾಜಿ ಸಚಿವ ಬಸನಗೌಡ ಪಾಟೀಲ್ ಯತ್ನಾಳ್, ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಸೇರಿದಂತೆ ಪಕ್ಷದೊಂದಿಗೆ ಅಂತರ ಕಾಯ್ದುಕೊಂಡಿರುವ ನಾಯಕರನ್ನು ಮತ್ತೆ ಬಿಜೆಪಿಯ ಮುಖ್ಯವಾಹಿನಿಗೆ ಕರೆತರುವ ಅಗತ್ಯದ ಬಗ್ಗೆ ಬೆಂಬಲಿಗರು ಹಾಗೂ ಕಾರ್ಯಕರ್ತರ ಒಂದು ವರ್ಗದಲ್ಲಿ ಒತ್ತಾಯ ಕೇಳಿಬರುತ್ತಿದೆ.

**ಯತ್ನಾಳ್‌ವಿಜಯೇಂದ್ರ ಭೇಟಿ :**

ಇತ್ತೀಚೆಗೆ ಧಾರವಾಡದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಪಕ್ಷದಿಂದ ಉಚ್ಚಾಟನೆಗೊಂಡಿರುವ ಬಸನಗೌಡ ಪಾಟೀಲ್ ಯತ್ನಾಳ್ ಭೇಟಿಯಾಗಿದ್ದಾರೆ ಎಂಬ ವಿಚಾರ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ಇಬ್ಬರ ನಡುವೆ ಸುಮಾರು 30 ನಿಮಿಷಗಳಿಗೂ ಹೆಚ್ಚು ಕಾಲ ಮಾತುಕತೆ ನಡೆದಿತ್ತು ಎಂಬ ಮಾಹಿತಿ ಚರ್ಚೆಗೆ ಗ್ರಾಸವಾಗಿದೆ. ಈ ಭೇಟಿ ಮುಂದಿನ ದಿನಗಳಲ್ಲಿ ಬಿಜೆಪಿಯೊಳಗಿನ ಸಮೀಕರಣಗಳಲ್ಲಿ ಬದಲಾವಣೆಗೆ ಮುನ್ನುಡಿಯಾಗಬಹುದೇ ಎಂಬ ಪ್ರಶ್ನೆ ಎದುರಾಗಿದೆ. ಆದರೂ, ಯತ್ನಾಳ್ ಅವರನ್ನು ಮತ್ತೆ ಪಕ್ಷಕ್ಕೆ ಕರೆತರಬೇಕು ಎಂಬ ಅಭಿಪ್ರಾಯ ಅವರ ಬೆಂಬಲಿಗರಲ್ಲಿ ವ್ಯಕ್ತವಾಗುತ್ತಿದೆ. ಉತ್ತರ ಕರ್ನಾಟಕದಲ್ಲಿ ಪ್ರಭಾವ ಹೊಂದಿರುವ ಅವರು, ಪ್ರಖರ ಹಿಂದೂಪರ ನಿಲುವುಗಳ ಮೂಲಕ ತಮದೇ ಆದ ರಾಜಕೀಯ ನೆಲೆಯನ್ನು ರೂಪಿಸಿಕೊಂಡಿದ್ದಾರೆ. ಅವರ ಮರುಪ್ರವೇಶದಿಂದ ಪಕ್ಷದ ಸಂಘಟನಾತ್ಮಕ ಶಕ್ತಿ ಹೆಚ್ಚಬಹುದು ಮತ್ತು ಹಿಂದೂ ಮತಗಳ ಕ್ರೋಢೀಕರಣಕ್ಕೆ ನೆರವಾಗಬಹುದು ಎಂಬುದು ಅವರನ್ನು ಬೆಂಬಲಿಸುವವರ ವಾದವಾಗಿದೆ. ಇನ್ನೊಂದೆಡೆ, ಯತ್ನಾಳ್ ಅವರ ಹಿಂದಿನ ಹೇಳಿಕೆಗಳು, ಪಕ್ಷದ ರಾಜ್ಯ ನಾಯಕತ್ವದೊಂದಿಗಿನ ಭಿನ್ನಾಭಿಪ್ರಾಯಗಳು ಮತ್ತು ಶಿಸ್ತು ಕ್ರಮಗಳ ಹಿನ್ನೆಲೆಯನ್ನು ಗಮನಿಸಿದರೆ, ಅವರನ್ನು ಮರಳಿ ಕರೆತರುವುದು ಅಷ್ಟು ಸುಲಭದ ಕೆಲಸವಲ್ಲ. ಇದಕ್ಕೆ ರಾಜ್ಯ ನಾಯಕತ್ವದ ಒಪ್ಪಿಗೆ ಮಾತ್ರವಲ್ಲದೆ, ಪಕ್ಷದ ರಾಷ್ಟ್ರೀಯ ನಾಯಕರ ರಾಜಕೀಯ ನಿರ್ಧಾರವೂ ನಿರ್ಣಾಯಕವಾಗಬಹುದು.

**ಈಶ್ವರಪ್ಪ ಅವರ ಮರುಪ್ರವೇಶಕ್ಕೂ ಪ್ರಯತ್ನ:**

ಶಿವಮೊಗ್ಗದಲ್ಲಿ ಬನ್ನಿ ನೀಡುವ ನೆಪದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಕೆ.ಎಸ್.ಈಶ್ವರಪ್ಪ ಭೇಟಿಯಾಗಿದ್ದಾರೆ ಎಂಬ ವಿಚಾರವೂ ಗಮನ ಸೆಳೆದಿದೆ. ಈ ಭೇಟಿಯು ಕೇವಲ ವೈಯಕ್ತಿಕ ಸೌಹಾರ್ದದ ಭೇಟಿಯಾಗಿತ್ತೇ ಅಥವಾ ರಾಜಕೀಯ ಸಮನ್ವಯದ ಸಾಧ್ಯತೆಗಳಿಗೂ ಅವಕಾಶ ಕಲ್ಪಿಸಿತೇ ಎಂಬ ಚರ್ಚೆ ನಡೆಯುತ್ತಿದೆ. ಬಿಜೆಪಿಯ ಹಿರಿಯ ನಾಯಕರಾಗಿದ್ದ ಈಶ್ವರಪ್ಪ ಅವರು ಪಕ್ಷದೊಂದಿಗೆ ಹೊಂದಿದ್ದ ಹಿಂದಿನ ಸಂಬಂಧ, ಶಿವಮೊಗ್ಗ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಅವರಿಗಿರುವ ವೈಯಕ್ತಿಕ ಪ್ರಭಾವ ಮತ್ತು ಕಾರ್ಯಕರ್ತರೊಂದಿಗಿನ ಸಂಪರ್ಕವನ್ನು ಪರಿಗಣಿಸಿದರೆ, ಅವರನ್ನು ಮತ್ತೆ ಪಕ್ಷದ ಮುಖ್ಯವಾಹಿನಿಗೆ ಕರೆತರುವ ಪ್ರಯತ್ನ ಬಿಜೆಪಿಗೆ ರಾಜಕೀಯವಾಗಿ ಮಹತ್ವದ್ದಾಗಬಹುದು. ಈಶ್ವರಪ್ಪ ಅವರಂತಹ ನಾಯಕರನ್ನು ದೂರವಿಟ್ಟುಕೊಂಡೇ ಚುನಾವಣಾ ಸಿದ್ಧತೆ ನಡೆಸುವುದಕ್ಕಿಂತ, ಅವರೊಂದಿಗೆ ಸಮನ್ವಯ ಸಾಧಿಸುವುದು ಪಕ್ಷಕ್ಕೆ ಅನುಕೂಲಕರವಾಗಬಹುದು ಎಂಬ ಅಭಿಪ್ರಾಯ ಬಿಜೆಪಿಯ ಬೆಂಬಲಿಗರ ಒಂದು ವರ್ಗದಲ್ಲಿದೆ.

**ಅನಂತ್ ಕುಮಾರ್ ಹೆಗಡೆ ಅವರನ್ನು ಸಕ್ರಿಯಗೊಳಿಸುವ ಸವಾಲು :**

ಕೇಂದ್ರ ಮಾಜಿ ಸಚಿವ ಅನಂತ್ ಕುಮಾರ್ ಹೆಗಡೆ ಅವರ ವಿಚಾರವೂ ಈ ಚರ್ಚೆಯಲ್ಲಿ ಪ್ರಮುಖವಾಗಿದೆ. ಪಕ್ಷದೊಳಗಿದ್ದರೂ ಇತ್ತೀಚಿನ ವರ್ಷಗಳಲ್ಲಿ ಸಕ್ರಿಯ ರಾಜಕೀಯದಿಂದ ದೂರ ಉಳಿದಿರುವಂತೆ ಕಾಣುವ ಹೆಗಡೆ ಅವರನ್ನು ಮತ್ತೆ ಸಂಘಟನಾತ್ಮಕವಾಗಿ ತೊಡಗಿಸಿಕೊಳ್ಳಬೇಕೆಂಬ ಅಭಿಪ್ರಾಯ ಕೆಲವು ಬಿಜೆಪಿ ಬೆಂಬಲಿಗರಲ್ಲಿ ವ್ಯಕ್ತವಾಗುತ್ತಿದೆ. ತಮ ಪ್ರಖರ ಹಿಂದೂಪರ ಭಾಷಣಗಳು ಮತ್ತು ರಾಜಕೀಯ ನಿಲುವುಗಳಿಂದ ಗುರುತಿಸಿಕೊಂಡಿರುವ ಹೆಗಡೆ ಅವರನ್ನು ಸಕ್ರಿಯಗೊಳಿಸಿದರೆ, ಪಕ್ಷದ ಸೈದ್ಧಾಂತಿಕ ಬೆಂಬಲಿಗರಲ್ಲಿ ಹೊಸ ಉತ್ಸಾಹ ಮೂಡಬಹುದು ಎಂಬ ನಿರೀಕ್ಷೆ ಇದೆ.

# ಪ್ರತಿ ಯೂನಿಟ್‌ಗೆ 40 ರಿಂದ 50 ಪೈಸೆ ವಿದ್ಯುತ್ ದರ ಹೆಚ್ಚಳಕ್ಕೆ ಮುಂದಾದ ರಾಜ್ಯ ಸರ್ಕಾರ



ಬೆಂಗಳೂರು: ರಾಜ್ಯದಲ್ಲಿ ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ಉಂಟಾಗಿದ್ದ ತೀವ್ರ ವಿದ್ಯುತ್ ಬಿಕ್ಕಟ್ಟನ್ನು ನಿಭಾಯಿಸಲು ಉಂಟಾದ ಹೆಚ್ಚುವರಿ ವೆಚ್ಚವನ್ನು ಸರಿದೂಗಿಸಲು, ಅಕ್ಟೋಬರ್ ಮತ್ತು ನವೆಂಬರ್ ಅವಧಿಯಲ್ಲಿ ವಿದ್ಯುತ್ ದರವನ್ನು ಪ್ರತಿ ಯೂನಿಟ್‌ಗೆ 40 ರಿಂದ 50 ಪೈಸೆಯಷ್ಟು ಹೆಚ್ಚಿಸಲು ರಾಜ್ಯ ಸರ್ಕಾರ ಹಾಗೂ ಇಂಧನ ಇಲಾಖೆ ಯೋಜಿಸಿವೆ.ನಕ್ಷೆಗಳನ್ನು ನೋಡಿ ಮುಂಬರುವ ನವಂಬರ್ 1 ರಿಂದಲೇ ನೂತರ ದರ ಪರಿಷ್ಕರಣೆಯಾಗುವ ಸಂಭವವಿದೆ. ಈ ದರ ಏರಿಕೆಯು ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ನಿಯಮಾವಳಿಗಳ ಅಡಿಯಲ್ಲಿ ಬರಲಿದ್ದು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅಂತಿಮ ಅನುಮೋದನೆಯೊಂದಿಗೆ ಜಾರಿಗೆ ಬರಲಿದೆ. ಉಚಿತ ವಿದ್ಯುತ್ ಒದಗಿಸುವ ಗೃಹ ಜ್ಯೋತಿ ಯೋಜನೆಯ ವ್ಯಾಪ್ತಿಗೆ ಬಾರದ ಗ್ರಾಹಕರು ಮತ್ತು ವಾಣಿಜ್ಯ ಬಳಕೆಯ ಗ್ರಾಹಕರು ಈ ಹೆಚ್ಚುವರಿ ದರವನ್ನು ತಮ ಮಾಸಿಕ ಬಿಲ್‌ನಲ್ಲಿ ಪಾವತಿಸಬೇಕಾಗುತ್ತದೆ.

ಸೆಪ್ಟೆಂಬರ್ ತಿಂಗಳಿನಲ್ಲಿ ನೈಋತ್ಯ ಮುಂಗಾರು ಮಳೆಯ ಅಭಾವ ಮತ್ತು ಒಣ ಹವೆಯ ವಾತಾವರಣದಿಂದಾಗಿ ರಾಜ್ಯದಾದ್ಯಂತ ವಿದ್ಯುತ್‌ಗೆ ಅಭೂತಪೂರ್ವ ಬೇಡಿಕೆ ಸೃಷ್ಟಿಯಾಗಿತ್ತು. ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ವಿದ್ಯುತ್ ಬೇಡಿಕೆಯು ಬರೋಬ್ಬರಿ 20,000 ಮೆಗಾವ್ಯಾಟ್ ದಾಟಿ ಹೊಸ ದಾಖಲೆ ಬರೆದಿದೆ.

**ಪವನ ವಿದ್ಯುತ್ ಉತ್ಪಾದನೆ ಕುಸಿತ:**

ರಾಜ್ಯದಲ್ಲಿ ಜಲ, ಉಷ್ಣ, ಸೌರ ಮತ್ತು ಪವನ ಶಕ್ತಿಯ ಮೂಲಗಳಿಂದ ಒಟ್ಟು 22,000 ಮೆಗಾವ್ಯಾಟ್‌ವರೆಗೆ ಬೇಡಿಕೆ ಪೂರೈಸುವ ಸಾಮರ್ಥ್ಯವಿದ್ದರೂ, ಗಾಳಿಯ ವೇಗ ಕಡಿಮೆಯಾದ ಕಾರಣ ಪವನ ವಿದ್ಯುತ್ ಉತ್ಪಾದನೆ ತೀವ್ರವಾಗಿ ಕುಸಿಯಿತು. ದೈನಂದಿನ 2,500 ? 3,000 ಮೆಗಾವ್ಯಾಟ್ ತಲುಪುತ್ತಿದ್ದ ಪವನ ವಿದ್ಯುತ್ ಉತ್ಪಾದನೆ ಕೇವಲ 200 ? 300 ಮೆಗಾವ್ಯಾಟ್‌ಗೆ ಕುಸಿಯಿತು.ರಾತ್ರಿಯ ಸಮಯದಲ್ಲಿ ಸೌರ ವಿದ್ಯುತ್ ಲಭ್ಯವಿಲ್ಲದಿರುವುದರಿಂದ ಮತ್ತು ಪವನ ವಿದ್ಯುತ್ ಉತ್ಪಾದನೆಯೂ ಇಳಿಕೆಯಾದ್ದರಿಂದ ಪವರ್ ಗ್ರಿಡ್ ಮೇಲಿನ ಒತ್ತಡ ತೀವ್ರವಾಗಿ ಹೆಚ್ಚಾಯಿತು.

**ದುಬಾರಿ ವಿದ್ಯುತ್ ಖರೀದಿ :**

ರಾಜ್ಯದಲ್ಲಿದ್ದ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಮತ್ತು ಪದೇ ಪದೇ ಉಂಟಾಗುತ್ತಿದ್ದ ವಿದ್ಯುತ್ ಕಡಿತವನ್ನು ತಡೆಯಲು ಸರ್ಕಾರವು ಮುಕ್ತ ಮಾರುಕಟ್ಟೆಯಿಂದ ಹೆಚ್ಚಿನ ದರ ನೀಡಿ ವಿದ್ಯುತ್ ಖರೀದಿಸಬೇಕಾಯಿತು. ಸಾಮಾನ್ಯವಾಗಿ ನಾವು ಪ್ರತಿ ಯೂನಿಟ್‌ಗೆ ಸುಮಾರು 6 ರಂತೆ ವಿದ್ಯುತ್ ಖರೀದಿಸುತ್ತೇವೆ. ಮಾರುಕಟ್ಟೆಯಲ್ಲಿ ಗರಿಷ್ಠ ಎಂದರೆ 7 ರಿಂದ 8 ಇರುತ್ತದೆ. ಆದರೆ ಸೆಪ್ಟೆಂಬರ್‌ನಲ್ಲಿ ದಕ್ಷಿಣ ಭಾರತದ ಇತರ ರಾಜ್ಯಗಳಲ್ಲೂ ತೀವ್ರ ವಿದ್ಯುತ್ ಅಭಾವವಿದ್ದ ಕಾರಣ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಕೆಲವು ರಾಜ್ಯಗಳು ಹಗಲಿನ ವೇಳೆಯಲ್ಲೇ ಪ್ರತಿ ಯೂನಿಟ್‌ಗೆ 25 ರಿಂದ 30 ಪಾವತಿಸಿ ವಿದ್ಯುತ್ ಖರೀದಿಸಿದವು ಎಂದು ಇಂಧನ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಗ್ರಾಹಕರಿಗೆ ವಿದ್ಯುತ್ ವಿವೇಕಯುತ ಬಳಕೆ ಸಲಹೆ :**

ರಾತ್ರಿ ವೇಳೆಯ ಗ್ರಿಡ್ ಒತ್ತಡವನ್ನು ಕಡಿಮೆ ಮಾಡಲು ಮತ್ತು ವಿದ್ಯುತ್ ಬಳಕೆಯನ್ನು ನಿಯಂತ್ರಿಸಲು ಬೆಸ್ಕಾಂ ಸೇರಿದಂತೆ ವಿವಿಧ ಎಸ್ಕಾಂಗಳು ಗ್ರಾಹಕರಲ್ಲಿ ಜಾಗೃತಿ ಮೂಡಿಸಲು ನಿರ್ಧರಿಸಿವೆ.

**ಹಗಲಿನ ಬಳಕೆ ಹೆಚ್ಚಿಸಿ :**

ವಾಷಿಂಗ್ ಮೆಷಿನ್‌ಗಳು, ಹೈ-ಹಾರ್ಸ್‌ಪವರ್ ವಾಟರ್ ಪಂಪ್‌ಗಳು ಸೇರಿದಂತೆ ಹೆಚ್ಚು ವಿದ್ಯುತ್ ಎಳೆಯುವ ಉಪಕರಣಗಳನ್ನು ಸೌರಶಕ್ತಿ ಲಭ್ಯವಿರುವ ಹಗಲಿನ ವೇಳೆಯಲ್ಲೇ ಬಳಸಿ ಎಂದು ಅಧಿಕಾರಿಗಳು ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

**ವಾಣಿಜ್ಯ ಸಂಸ್ಥೆಗಳ ಸವಾಲು :**

ವಾಣಿಜ್ಯಸಂಸ್ಥೆಗಳಕಾರ್ಯಾಚರಣೆ ನಿಯಂತ್ರಿಸಲು ಸಾಧ್ಯವಿಲ್ಲದಿದ್ದರೂ, ಗೃಹ ಬಳಕೆಯ ಗ್ರಾಹಕರು ಸ್ವಯಂಪ್ರೇರಿತವಾಗಿ ರಾತ್ರಿ ವೇಳೆಯ ಬಳಕೆಯನ್ನು ಯೋಜಿಸಿದರೆ ಜಾಲದ ಮೇಲಿನ ಒತ್ತಡ ಕಡಿಮೆಯಾಗಲಿದೆ.ಕರ್ನಾಟಕವು ಈಗಾಗಲೇ 3 ವರ್ಷಗಳ ಅವಧಿಯ ದರ ನಿಗದಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು, 2025ರ ದರ ಪರಿಷ್ಕರಣೆಯು 2028ರವರೆಗೆ ಜಾರಿಯಲ್ಲಿರುತ್ತದೆ. ಆದಾಗ್ಯೂ, ಸೆಪ್ಟೆಂಬರ್‌ನಲ್ಲಾದ ಅಸಾಧಾರಣ ವೆಚ್ಚವನ್ನು ಭರಿಸಲು ಈಕಕಅಂ ಅಡಿಯಲ್ಲಿ ಈ ತಾತ್ಕಾಲಿಕ ಅಲ್ಪಾವಧಿ ಹೆಚ್ಚಳವನ್ನು ಕೈಗೊಳ್ಳಲಾಗುತ್ತಿದ್ದು, ಇದು ಮುಂಬರುವ ತಿಂಗಳಿಗೆ ಮಾತ್ರ ಅನ್ವಯಿಸಲಿದೆ ಎಂದು ಇಂಧನ ಇಲಾಖೆಯ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

# ಬೆಂಗಳೂರಲ್ಲಿ 58 ಲಕ್ಷ ಮಂದಿ ಅರ್ಹ ಮತದಾರರು



ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ನಾಳೆಗೆ ಮುಕ್ತಾಯಗೊಳ್ಳಲಿದ್ದು, ನಗರದಲ್ಲಿ ಸುಮಾರು 58 ಲಕ್ಷ ಮಂದಿ ಮತದಾರರ ಪಟ್ಟಿಗೆ ಸೇರ್ಪಡೆಯಾಗುವ ನಿರೀಕ್ಷೆಯಿದೆ.

ಈಗಾಗಲೇ ಸುಮಾರು 57 ಲಕ್ಷ ಮಂದಿಯನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲಾಗಿದ್ದು, ಮಾಹಿತಿ ಅಪೂರ್ಣವಾಗಿರುವುದು ಹಾಗೂ ಸರಿಯಾದ ಮಾಹಿತಿ ನೀಡದ ಹಿನ್ನೆಲೆಯಲ್ಲಿ 24 ಲಕ್ಷ ಮಂದಿಗೆ ನೋಟಿಸ್ ನೀಡಲಾಗಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದ್ದಾರೆ. ಎಸ್‌ಐಆರ್ ಪ್ರಕ್ರಿಯೆಯ ಕುರಿತು ಮಾಹಿತಿ ನೀಡಿದ ಅವರು, ಮತದಾರರ ಪಟ್ಟಿ ಪರಿಷ್ಕರಣೆಗಾಗಿ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ ಮನೆಗೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಮತದಾರರ ಮಾಹಿತಿಯನ್ನು ದೃಢೀಕರಿಸುವುದು ಹಾಗೂ ಪಟ್ಟಿಯಲ್ಲಿನ ಲೋಪದೋಷಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದರು.

**5.43 ಲಕ್ಷ ಅರ್ಜಿ ಸಲ್ಲಿಕೆ:**

ಮತದಾರರ ಪಟ್ಟಿ ಪರಿಷ್ಕರಣೆಗಾಗಿ ಒಟ್ಟು 5.43 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಈ ಪೈಕಿ ಹೊಸ ಮತದಾರರ ಸೇರ್ಪಡೆಗಾಗಿ ಫಾರ್ಮ್-6 ಮೂಲಕ 2.21 ಲಕ್ಷ ಅರ್ಜಿಗಳು ಬಂದಿವೆ. ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕಲು ಬಳಸುವ ಫಾರ್ಮ್-7 ಮೂಲಕ ಕೇವಲ 5 ಸಾವಿರ ಅರ್ಜಿಗಳು ಸಲ್ಲಿಕೆಯಾಗಿವೆ. ಇನ್ನು, ಮತದಾರರ ವಿವರಗಳಲ್ಲಿ ತಿದ್ದುಪಡಿ ಮಾಡುವುದು ಹಾಗೂ ವಿಳಾಸ ಬದಲಾವಣೆಗೆ ಸಂಬಂಧಿಸಿದಂತೆ ಫಾರ್ಮ್-8 ಮೂಲಕ 3.12 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಈ ಅರ್ಜಿಗಳ ಪರಿಶೀಲನೆ ಬಳಿಕ ಸುಮಾರು 2 ಲಕ್ಷ ಹೊಸ ಮತದಾರರು ಪಟ್ಟಿಗೆ ಸೇರ್ಪಡೆಯಾಗುವ ನಿರೀಕ್ಷೆಯಿದೆ. ಇದರಿಂದ ಒಟ್ಟು ಸೇರ್ಪಡೆಯಾಗುವ ಮತದಾರರ ಸಂಖ್ಯೆ ಸುಮಾರು 58 ಲಕ್ಷಕ್ಕೆ ತಲುಪಬಹುದು ಎಂದು ಅಂದಾಜಿಸಲಾಗಿದೆ.

**ಎಎಸ್‌ಡಿಡಿಒ ಪಟ್ಟಿಯಲ್ಲಿರುವವರಿಗೂ ಅವಕಾಶ:**

ಈಗಾಗಲೇ ಎಎಸ್‌ಡಿಡಿಒ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಮತದಾರರಿಗೂ ತಮ್ಮ ದಾಖಲೆಗಳನ್ನು ಸಲ್ಲಿಸಿ ಮತದಾರರ ಪಟ್ಟಿಗೆ ಸೇರ್ಪಡೆಯಾಗಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕಾಗಿ ವಿಶೇಷ ಎಸ್‌ಎಸ್‌ಎಸ್ ಅಭಿಯಾನದ ಮೂಲಕ ಸೇರ್ಪಡೆ ಪ್ರಕ್ರಿಯೆ ನಡೆಸಲು ವ್ಯವಸ್ಥೆ ಮಾಡಲಾಗುವುದು ಎಂದು ಮಹೇಶ್ವರ್ ರಾವ್ ತಿಳಿಸಿದರು. ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಿಂದ ಯಾವುದೇ ಮತದಾರರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರತಿಯೊಂದು ಹಂತದಲ್ಲಿಯೂ ಮಾಹಿತಿ ಹಾಗೂ ದಾಖಲೆಗಳ ಪರಿಶೀಲನೆ ನಡೆಸುವ ಜವಾಬ್ದಾರಿ ಚುನಾವಣಾ ಆಯೋಗದ್ದಾಗಿದೆ. ಅರ್ಜಿಗಳ ಪರಿಶೀಲನೆ ಮತ್ತು ದೃಢೀಕರಣದ ಬಳಿಕ ಅರ್ಹ ಮತದಾರರನ್ನು ಪಟ್ಟಿಗೆ ಸೇರ್ಪಡೆಗೊಳಿಸುವ ಪ್ರಕ್ರಿಯೆ ನಡೆಯಲಿದೆ ಎಂದು ಅವರು ಹೇಳಿದರು.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com